## ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಶಿವಮೊಗ್ಗ

ಶಿಕ್ಷಣದ ಹಕ್ಕು

ಸರ್ವ ಶಿಕ್ಷಣ ಅಭಿಯಾನ
ಎಲ್ಲರೂ ಕಲಿಯೋಣ–ಎಲ್ಲರೂ ಬೆಳೆಯೋಣ

### ಆರ್.ಇ.ಎಂ.ಎಸ್ ಮಧ್ಯವರ್ತನೆಯಡಿಯಲ್ಲಿ ಕೈಗೊಂಡ ಅಧ್ಯಯನ : 2015–16

# ಅಧ್ಯಯನದ ಶೀರ್ಷಿಕೆ :– "ಶಿವಮೊಗ್ಗ ಜಿಲ್ಲೆಯ ಆಯ್ದ ಶಾಲೆಗಳಲ್ಲಿನ ಮಕ್ಕಳ ಆರೋಗ್ಯ ತಪಾಸಣೆಯ ಪರಿಣಾಮಕಾರತ್ವತೆ"

## ಕಾರ್ಯನಿರ್ವಹಣ ವರದಿ




**ಅಧ್ಯಯನಕಾರರು:–** **ಶ್ರೀಮತಿ ಶಬಾನ ಅಂಜುಮ್**

**ಉಪನ್ಯಾಸಕರು, ಡಯಟ್, ಶಿವಮೊಗ್ಗ**

ಮಾರ್ಗದರ್ಶಕರು:– ಶ್ರೀ ಜಿ , ಎಸ್ , ಪ್ರಭುಸ್ವಾಮಿ

ಪ್ರಾಂಶುಪಾಲರು , **ಡಯಟ್, ಶಿವಮೊಗ್ಗ**

ಸಲ್ಲಿಕೆ; ರಾಜ್ಯ ಯೋಜನಾ ನಿರ್ದೇಶಕರು ಸರ್ವ ಶಿಕ್ಷಣ ಅಭಿಯಾನ ಬೆಂಗಳೂರು.

# ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಶಿವಮೊಗ್ಗ

ಆರ್.ಇ.ಎಂ.ಎಸ್ ಮಧ್ಯವರ್ತನೆದಡಿಯಲ್ಲಿ ಕೈಗೊಂಡ ಒಂದು ಅಧ್ಯಯನ

**2015-16**

ಅಧ್ಯಯನದ ಶೀರ್ಷಿಕೆ;

**"ಮಕ್ಕಳ ಆರೋಗ್ಯ ತಪಾಸಣೆಯ ಪರಿಣಾಮಕಾರಿತ್ವತೆಯ ಒಂದು ಕಿರು ಅಧ್ಯಯನ"**


ಅಧ್ಯಯನಕಾರರು;

ಶ್ರೀಮತಿ ಶಬನಾ ಅಂಜುಮ್

ಉಪನ್ಯಾಸಕರು, ಡಯಟ್ ಶಿವಮೊಗ್ಗ


ಸಲ್ಲಿಕೆ;

# ಕೃತಜ್ಞತೆಗಳು

ಆರ್,ಇ,ಎಂ,ಎಸ್ ವತಿಯಿಂದ ಕಿರು ಅಧ್ಯಯನಗಳನ್ನು ಹಮ್ಮಿಕೊಂಡಿದ್ದು ,ಈ ಕ್ಷೇತ್ರದಲ್ಲಿ ನನಗೂ ಒಂದು ಅಧ್ಯಯನ ಮಾಡಲು ಅವಕಾಶ ಕಲ್ಪಿಸಿಕೊಟ್ಟ **ಆರ್,ಇ,ಎಂ,ಎಸ್ ಗೆ** ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಶ್ರೀ ಜಿ,ಎಸ್ ಪ್ರಭುಸ್ವಾಮಿ, ಪ್ರಾಂಶುಪಾಲರು, ಡಯಟ್, ಶಿವಮೊಗ್ಗ ಇವರು ಅಧ್ಯಯನ ಕೈಗೊಳ್ಳಲು ಸಹಕಾರ ನೀಡಿರುತ್ತಾರೆ ಇವರಿಗೆ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ .

ನನ್ನ ಸಹೊದ್ಯೋಗಿ,ಮಿತ್ರರು ಮತ್ತು ಆರ್,ಇ,ಎಂ,ಎಸ್, ನೋಡಲ್ ಅಧಿಕಾರಿಯಾದ ಶ್ರೀ ನಾಗೇಂದ್ರಪ್ಪ, ಎ,ಕೆ, ಇವರು ನೀಡಿರುವ ಸಹಕಾರ ಮತ್ತು ಬೆಂಬಲಕ್ಕೆ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ

ಶಿವಮೊಗ್ಗ ಜಿಲ್ಲೆಯ ಏಳು ತಾಲ್ಲೂಕಿನ ಆಯ್ದ ಶಾಲೆಗಳ ಸಿ,ಆರ್,ಪಿ,ಗಳು ಅಧ್ಯಯನಕ್ಕಾಗಿ ನನಗೆ ಸಹಕಾರ ನೀಡಿರುತ್ತಾರೆ ಇವರಿಗೆ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ನನ್ನ ಈ ಅಧ್ಯಯನಕ್ಕೆ ಸೂಕ್ತ ಮಾರ್ಗದರ್ಶನ ಮತ್ತು ತಿದ್ದುಪಡಿ ಮಾಡಲು ಸಹಕರಿಸಿದ ನನ್ನ ಸಹೊದ್ಯೋಗಿ ಮತ್ತು ಸಹೋದರರಾದ ಪಿ,ನಾಗರಾಜ ಮುಖ್ಯ ಶಿಕ್ಷಕರು ಸ,ಪ್ರೌ,ಶಾ ಮಿಳಘಟ್ಟ ಇವರಿಗೂ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ

ಕೊನೆಯದಾಗಿ ಆಯ್ದ ಶಾಲೆಯ ಮುಖ್ಯ ಶಿಕ್ಷಕರು ತಮ್ಮ ಅಭಿಪ್ರಾಯಗಳನ್ನು ಮುಕ್ತವಾಗಿ ವ್ಯಕ್ತಪಡಿಸಿ ಅಧ್ಯಯನ ಪೂರ್ಣಗೊಳಿಸಲು ನನಗೆ ಸಹಕರಿಸಿರುತ್ತಾರೆ ಇವರೆಲ್ಲರಿಗೂ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

---------------88888---------------

# ಪರಿವಿಡಿ


| ಕ್ರಮ ಸಂಖ್ಯೆ | ವಿಷಯ ಸೂಚಿ | ಪುಟ ಸಂಖ್ಯೆ |
|---|---|---|
| 01 | ಅಧ್ಯಾಯ 1; ಪೀಠಿಕೆ; | |
| 02 | ಅಧ್ಯಾಯ; 2 ಅಧ್ಯಯನದ ಶೀರ್ಷಿಕೆ ಮತ್ತು ಅದರ ಕಾಳಜಿ | |
| 03 | ಅಧ್ಯಾಯ ; 3 ಆರೋಗ್ಯ ತಪಾಸಣೆಯ ಹಿನ್ನೆಲೆ, ಮಹತ್ವ ಮತ್ತು ( ಕಾಯಿಲೆಗಳು ) ಗುರುತಿಸುವಿಕೆ. | |
| 04 | ಅಧ್ಯಾಯ -4 4.1- ಅಧ್ಯಯನದ ಉದ್ದೇಶಗಳು ; 4.2 ಅಧ್ಯಯನದ ವಿನ್ಯಾಸ ; 4.3 – ಅಧ್ಯಯನದ ವ್ಯಾಪ್ತಿ; 4.4 ದತ್ತಾಂಶಗಳ ಸಂಗ್ರಹಣೆ | |
| 05 | ಅಧ್ಯಾಯ -5 ದತ್ತಾಂಶಗಳ ವಿಶ್ಲೇಷಣೆ; | |
| 06 | ಅಧ್ಯಾಯ 6- ಅಧ್ಯಯನದ ಒಳನೋಟಗಳು ; | |
| 07 | ಅಧ್ಯಾಯ 7- ಅಧ್ಯಯನದ ಫಲಶೃತಿ ; | |
| 08 | ಅಧ್ಯಾಯ -8 8.1- ಸಲಹೆಗಳು (ಪರಿಹಾರಗಳು); 8.2ಅಧ್ಯಯನ ಮುಂದುವರೆಸಲು ಮುಂದಿನ ಕ್ಷೇತ್ರಗಳು | |
| | ಉಪಸಂಹಾರ: | |
| | **ಅನುಬಂಧಗಳು** | |
| | 1-ದತ್ತಾಂಶ ಸಂಗ್ರಹಣೆಗಾಗಿ ಸಿದ್ಧ ಪಡಿಸಿದ ಪ್ರಶ್ನಾವಳಿ | |
| | 2-ಪ್ರತಿಚಯನ ತಾಲ್ಲೂಕುವಾರು ಆಯ್ದ ಕ್ಲಸ್ಟರ್ ಗಳ ಪಟ್ಟಿ | |
| | 3-ಛಾಯಾ ಚಿತ್ರಗಳು | |
| | ಆಕರ ಗ್ರಂಥಗಳು | |

# ಅಧ್ಯಾಯ : 1

## ಪೀಠಿಕೆ : –

ಆರೋಗ್ಯವಂತ ಮಕ್ಕಳು ದೇಶದ ಆಸ್ತಿ, ಆರೋಗ್ಯವೇ ಭಾಗ್ಯ. "ಆರೋಗ್ಯವಂತ ಶರೀರದಲ್ಲಿ ಆರೋಗ್ಯಪೂರ್ಣ ಮನಸ್ಸಿರುತ್ತದೆ". 'ಆರೋಗ್ಯವೇ ಸರ್ವಸ್ವ', ಆರೋಗ್ಯವಿಲ್ಲದವರು ಯಾವ ಚಟುವಟಿಕೆಯಲ್ಲೂ ತಮ್ಮನ್ನು ಪೂರ್ಣವಾಗಿ ತೊಡಗಿಸಿಕೊಳ್ಳಲಾರರು .ಆದುದರಿಂದ ಮಕ್ಕಳು ಆರೋಗ್ಯವಾಗಿರುವುದು ಬಹು ಮುಖ್ಯ, ಆರೋಗ್ಯವನ್ನು ಕಾಪಾಡಿಕೊಳ್ಳಲು ಪ್ರಯತ್ನಿಸಬೇಕು..

ಶಾಲೆಗಳಲ್ಲಿ ಮಕ್ಕಳ ದಾಖಲಾತಿಗೂ – ಹಾಜರಾತಿಗೂ ಸಾಕಷ್ಟು ಅಂತರ ಇರುವುದನ್ನು ಕಾಣುತ್ತೇವೆ. ಇದಕ್ಕೆ ಕಾರಣಗಳು ಹಲವಾರು ಇವೆ ಉದಾಹರಣೆಗೆ; ಮನೆ ಕೆಲಸ, ವಲಸೆ, ದೂರದ ಊರಿಗೆ ಹೋಗುವುದು, ಪೋಷಕರ ಉದಾಸೀನ, ಶಿಶುಪಾಲನೆ, ಅನಾರೋಗ್ಯ ಇತ್ಯಾದಿ.

ವಿಶೇಷವಾಗಿ ಚಿಕ್ಕಮಕ್ಕಳು ಆಗಾಗ್ಗೆ ಅನಾರೋಗ್ಯಕ್ಕೆ ಈಡಾಗಿ ಶಾಲೆಗಳಿಗೆ ಗೈರುಹಾಜರಾಗುವುದು ನಮಗೆಲ್ಲ ತಿಳಿದಿದೆ. ಅನಾರೋಗ್ಯ ಮಕ್ಕಳ ದೈಹಿಕ ಬೆಳವಣಿಗೆ, ಮಾನಸಿಕ ಬೆಳವಣಿಗೆ, ಕಲಿಕೆಯಲ್ಲಿ ನಿರಾಸಕ್ತಿ (ಹಿಂದುಳಿಯುವಿಕೆ) ಗೈರುಹಾಜರಿ ಇತ್ಯಾದಿಗಳಿಂದಾಗಿ ಮಕ್ಕಳಿಗೆ ಶಾಲೆಯಿಂದ ಹೊರಗುಳಿಯುವುದರಲ್ಲಿ ಕೊನೆಗೊಳ್ಳುತ್ತದೆ.

"ಆರೋಗ್ಯವಂತ ದೇಹದಲ್ಲಿ ಆರೋಗ್ಯವಂತ ಮನಸ್ಸು" ಎಂಬ ನಾಣ್ಣುಡಿ ಅದೆಷ್ಟು ಸತ್ಯ ಹಾಗು ಅರ್ಥಗರ್ಭಿತ! ಹಾಗಾಗಿ ನಾವು ಶಾಲೆಗಳಲ್ಲಿ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡಬೇಕಾಗಿದೆ. ಮಕ್ಕಳ ಆರೋಗ್ಯವನ್ನು ಸುಧಾರಿಸುವಲ್ಲಿ ಹಾಗು ಅವರ ಆರೋಗ್ಯ ಉತ್ತಮವಾಗಿರುವುದನ್ನು ಖಚಿತ ಪಡಿಸಿಕೊಳ್ಳಲು ಪೋಷಕರು, ಅರೋಗ್ಯ ಕಾರ್ಯಕರ್ತರು ಹಾಗು ವೈದ್ಯರ ಪಾತ್ರ ಬಹಳ ಅಗತ್ಯ. ಆರೋಗ್ಯ ಕಾರ್ಯಕರ್ತೆಯರು ಭೇಟಿ ನೀಡಿದಾಗ ತಿಳಿದಿರುವ ಅಂಶಗಳನ್ನು ಹಾಗು ತಮ್ಮಲ್ಲಿರುವ ಔಷಧಿಗಳನ್ನ ಕೊಟ್ಟು ಉಪಚರಿಸಬೇಕು. ಆದರೆ ವೈದ್ಯರು ತಮ್ಮಲ್ಲಿಗೆ ಬಂದಿರುವ ರೋಗಿಗಳನ್ನು ಪರೀಕ್ಷಿಸಿ ವ್ಯಾಧಿಯನ್ನು ಪತ್ತೆ ಹಚ್ಚಿ ಚಿಕಿತ್ಸೆ ನೀಡುತ್ತಾರೆ. ಕೆಲವು ಹಿಂದುಳಿದ ಗ್ರಾಮಗಳಲ್ಲಿ ಜನರು ವೈದ್ಯರಲ್ಲಿಗೆ ಹೋಗಲು ನಿರಾಕರಿಸುತ್ತಾರೆ. ಅಥವಾ ದುಬಾರಿಯಾಗುತ್ತದೆಂದು ತಿಳಿದು ಹೋಗದೆ ಉಳಿಯುತ್ತಾರೆ. ಶಾಲಾ ಹಂತದಲ್ಲಿ "ಆರೋಗ್ಯ ಶಿಕ್ಷಣ" ಎಲ್ಲಾ ವರ್ಗದವರಿಗೂ ಹಾಗು ಎಲ್ಲಾ ಮಕ್ಕಳಿಗೂ ಪ್ರಮುಖ ಪಾತ್ರವಹಿಸುತ್ತದೆ. ಇದರಲ್ಲಿ ಶಿಕ್ಷಕರ ಪಾತ್ರ ಬಹು ಮುಖ್ಯವಾದುದು, ಆದ್ದರಿಂದ ನಾವೆಲ್ಲರೂ ಮಕ್ಕಳ ದಾಖಲಾತಿ ಉತ್ತಮಗೊಳಿಸಲು ಮಕ್ಕಳ ಆರೋಗ್ಯವನ್ನು ಖಚಿತ ಪಡಿಸಿಕೊಳ್ಳಬೇಕು.

ಮಕ್ಕಳ ಆರೋಗ್ಯ ಕಾಪಾಡುವಲ್ಲಿ ನಮ್ಮ ಪಾತ್ರ ಬಹಳ ಮುಖ್ಯ. ನಾವು ಆಸಕ್ತಿ ಹಾಗು ಶ್ರದ್ಧೆ ತೋರಿ ಮಕ್ಕಳಿಗೆ ಆರೋಗ್ಯ ಹಾಗೂ ಸ್ವಯಂ ನೈರ್ಮಲ್ಯದ ಕಲ್ಪನೆಯನ್ನು ಪ್ರಾಥಮಿಕ ಹಂತದಲ್ಲಿ ಮೂಡಿಸುವಲ್ಲಿ ಯಶಸ್ವಿಯಾದರೆ ಮಕ್ಕಳನ್ನು ಆರೊಗ್ಯವಂತ ಪ್ರಜೆಗಳಾಗಿ ರೂಪಿಸಬಹುದು.

# ಅಧ್ಯಾಯ: 2

## ಅಧ್ಯಯನದ ಶೀರ್ಷಿಕೆ ಮತ್ತು ಅದರ ಕಾಳಜಿ ;

### "ಮಕ್ಕಳ ಆರೋಗ್ಯ ತಪಾಸಣೆಯ ಪರಿಣಾಮಕಾರತ್ವತೆಯ ಒಂದು ಕಿರು ಅಧ್ಯಯನ".

ಸುವರ್ಣ ಆರೋಗ್ಯ ಚೈತನ್ಯ ಕಾರ್ಯಕ್ರಮ ದಡಿಯಲ್ಲಿ 2006-07 ನೇ ಸಾಲಿನಿಂದ ಮಕ್ಕಳ ಆರೋಗ್ಯ ತಪಾಸಣೆಯನ್ನು ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳಲ್ಲಿನ 1 ರಿಂದ 10 ನೇ ತರಗತಿಯ ವಿದ್ಯಾರ್ಥಿಗಳಿಗೆ ಹಮ್ಮಿಕೊಳ್ಳಲಾಗುತ್ತಿದೆ ಹಾಗೂ ಆಗಸ್ಟ್ ತಿಂಗಳಿನಲ್ಲಿ ಸುವರ್ಣ ಆರೋಗ್ಯ ಮಾಸಾಚರಣೆಯನ್ನು ಆರೋಗ್ಯ ಇಲಾಖೆಯ ಸಹಯೋಗದೊಂದಿಗೆ ಹಮ್ಮಿಕೊಂಡು ಮಾರ್ಚ್ ಅಂತ್ಯಕ್ಕೆ ಶೇಕಡ 91.51% ಮಕ್ಕಳ ಆರೋಗ್ಯ ತಪಾಸಣೆ ನಡೆಸಲಾಗಿದ್ದು, ಅಗತ್ಯವಿರುವ ಮಕ್ಕಳಿಗೆ ಸೂಕ್ತ ಚಿಕಿತ್ಸೆ ನೀಡಲಾಗುತ್ತಿದೆ .ಪ್ರಸ್ತುತ ವರ್ಷ ಅಂದರೆ 2015-16 ನೇ ಸಾಲಿನ ಶೈಕ್ಷಣಿಕ ತಪಾಸಣೆಯ ಸ್ಥಿತಿಗತಿ ಅರಿತುಕೊಳ್ಳಲು ಒಂದು ಕಿರು ಅಧ್ಯಯನವನ್ನು ಶಿವಮೊಗ್ಗ ಜಿಲ್ಲೆಯ ಏಳು ತಾಲ್ಲೂಕಿನ ಆಯ್ದ 70 ಶಾಲೆಗಳಿಗೆ ಒಳಪಡುವ ಹಾಗೆ ಹಮ್ಮಿಕೊಳ್ಳಲಾಗಿದೆ.

# ಅಧ್ಯಾಯ: 3

## ಆರೋಗ್ಯ ತಪಾಸಣೆಯ ಹಿನ್ನೆಲೆ, ಮಹತ್ವ ಮತ್ತು (ಕಾಯಿಲೆಗಳು) ಗುರುತಿಸುವಿಕೆ;

1986 ರಾಷ್ಟ್ರೀಯ ಶಿಕ್ಷಣ ನೀತಿ ಹಿನ್ನೆಲೆಯಲ್ಲಿ ಸರ್ವರಿಗೂ ಗುಣಮಟ್ಟದ ಶಿಕ್ಷಣ ನೀಡಬೇಕೆಂಬ ಆಶಯದೊಂದಿಗೆ ಸರ್ವ ಶಿಕ್ಷಣ ಅಭಿಯಾನ ದಡಿಯಲ್ಲಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಅದರಲ್ಲಿ ಮಕ್ಕಳ ಆರೋಗ್ಯ ತಪಾಸಣೆ ಕುರಿತು ಸುವರ್ಣ ಆರೋಗ್ಯ ಚೈತನ್ಯ ಮಹತ್ವದ ಪಾತ್ರ ವಹಿಸುತ್ತಿದೆ. ಈ ಕಾರ್ಯಕ್ರಮವು 2006-07 ನೇ ಸಾಲಿನಲ್ಲಿ ಜಾರಿಗೆ ಬಂದಿದ್ದು , ಎಲ್ಲಾ ಮಕ್ಕಳು ಆರೋಗ್ಯ ತಪಾಸಣೆಗೆ ಒಳಪಡುತ್ತಾರೆ ಹಾಗೂ ಇವರ ತಪಾಸಣೆ ಕಾರ್ಯವು ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯರು ಮತ್ತು ಸರ್ಕಾರಿ ಆಸ್ಪತ್ರೆ ವೈದ್ಯರು ನಡೆಸಿಕೊಡುತ್ತಾರೆ.

ತಪಾಸಣಾ ಸಂದರ್ಭದಲ್ಲಿ ಮಗುವಿನಲ್ಲಿ ಯಾವುದೇ ಗಂಭೀರ ಕಾಯಿಲೆಗಳಾದ ಹೃದಯ, ಕಿಡ್ನಿ, ಕಣ್ಣು, ಮೂಳೆಗಳ ಸಮಸ್ಯೆ ಕಂಡು ಬಂದಲ್ಲಿ ಇಂಥಹ ಮಕ್ಕಳಿಗೆ ಉಚಿತವಾಗಿ ಚಿಕಿತ್ಸೆ ನೀಡಲು ಇಲಾಖೆ ಮುಂದಾಳತ್ವ ವಹಿಸುತ್ತಿದೆ ಹಾಗೂ ಈ ನಿಟ್ಟಿನಲ್ಲಿ ಶಿಕ್ಷಣ ಇಲಾಖೆಯು ಮಕ್ಕಳ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಜೊತೆಗೂಡಿ ಕೆಲಸ ನಿರ್ವಹಿಸುತ್ತಿದೆ. 2008-09 ನೇ ಸಾಲಿನಲ್ಲಿ 1415 ಮಕ್ಕಳಿಗೆ ಗಂಭೀರ ಕಾಯಿಲೆ ಪತ್ತೆಯಾಗಿದ್ದು ರೂ 778.39 ಲಕ್ಷ ಖರ್ಚು ವೆಚ್ಚ ಭರಿಸಲಾಗಿದೆ, 2009-10 ನಲ್ಲಿ 1623 ಮಕ್ಕಳಿಗೆ ಗಂಭೀರ ಕಾಯಿಲೆ ಪತ್ತೆಯಾಗಿದ್ದು ರೂ 808.12 ಲಕ್ಷ ಖರ್ಚು ವೆಚ್ಚ ಭರಿಸಲಾಗಿದೆ, 2010-11 ರಲ್ಲಿ 821 ಮಕ್ಕಳಿಗೆ ಗಂಭೀರ ಕಾಯಿಲೆ ಪತ್ತೆಯಾಗಿದ್ದು ರೂ 387 ಲಕ್ಷ ಖರ್ಚು ವೆಚ್ಚ ಭರಿಸಲಾಗಿದೆ 2012-13 ನೇ ಸಾಲಿನಲ್ಲಿ 1219 ಮಕ್ಕಳಿಗೆ ಗಂಭೀರ ಕಾಯಿಲೆ ಪತ್ತೆಯಾಗಿದ್ದು ರೂ 703.71 ಲಕ್ಷ ಖರ್ಚು ವೆಚ್ಚ ಭರಿಸಲಾಗಿದೆ. ಸದರಿ ವೆಚ್ಚವು ಎನ್.ಆರ್.ಹೆಚ್ .ಎಮ್. ಯೋಜನೆಯಡಿಯಲ್ಲಿ ಯಶಸ್ವಿನಿ ನೆಟ್ ವರ್ಕ್ ಆಸ್ಪತ್ರೆಗಳಲ್ಲಿ ಉಚಿತವಾದ ಚಿಕಿತ್ಸೆ/ ಶಸ್ತ್ರ ಚಿಕಿತ್ಸಾ ಸೌಲಭ್ಯ ಗಳನ್ನು ಕಲ್ಪಿಸಲಾಗಿದೆ.

ಸರ್ವ ಶಿಕ್ಷಣ ಅಭಿಯಾನ ಮತ್ತು ಎನ್.ಆರ್.ಹೆಚ್.ಎಮ್ .ವತಿಯಿಂದ ಹೆಲ್ತ್ ಕಾರ್ಡಗಳನ್ನು ಮುದ್ರಿಸಿ ಶಾಲೆಗಳಿಗೆ ವಿತರಿಸಲಾಗಿದೆ .ಹಾಗೂ ವೈದ್ಯರ ವಾಹನ ಇಂಧನ ವೆಚ್ಚಕ್ಕಾಗಿ ಪ್ರತಿ ತಾಲ್ಲೂಕಿಗೆ ರೂ 69318 /ರಂತೆ ರೂ122 ಲಕ್ಷಗಳನ್ನು ಮಧ್ಯಾಹ್ನದ ಉಪಹಾರ ಯೋಜನೆಯ ಲೆಕ್ಕ ಶೀರ್ಷಿಕೆಯಡಿ ಭರಿಸಲಾಗಿದೆ.

ಇದರ ಕೆಲವು **ಉದ್ದೇಶಗಳು** ಹೀಗಿವೆ ....

1) ಪ್ರತಿ ವರ್ಷವು ಆಗಸ್ಟ್ ತಿಂಗಳಲ್ಲಿ ಎಲ್ಲಾ ಶಾಲೆಗಳಲ್ಲಿ ಆರೋಗ್ಯ ತಪಾಸಣ ಕಾರ್ಯಕ್ರಮ ನಡೆಸುವುದು.
2) ಚಿಕ್ಕ ಪುಟ್ಟ ಕಾಯಿಲೆಗಳಿಗೆ ಸ್ಥಳದಲ್ಲೇ ಪರಿಹಾರಗಳನ್ನು ನೀಡುವುದು.
3) ಆರೋಗ್ಯ ಶಿಕ್ಷಣ ಅರಿವು ಉಂಟು ಮಾಡುವುದು ಉದಾಹರಣೆಗೆ ಶೌಚಾಲಯ ಸ್ವಚ್ಚತೆ ಮತ್ತು ಬಳಕೆ, ಕುಡಿಯುವ ನೀರಿನ ಶುಚಿತ್ವ, ವೈಯಕ್ತಿಕ ಶುಚಿತ್ವ ಇತ್ಯಾದಿ ಗಳನ್ನು ನಿತ್ಯ ಜೀವನದಲ್ಲಿ ಅಳವಡಿಸುವುದು.
4) ಟಿ.ಟಿ ಲಸಿಕೆಗಳನ್ನು ವಿದ್ಯಾರ್ಥಿಗಳಿಗೆ ನೀಡುವುದು.
5) ಶಾಲಾ ಮಕ್ಕಳಿಗೆ ಉಚಿತ ಹೃದಯ ಮತ್ತು ಇನ್ನಿತರೆ ಶಸ್ತ್ರ ಚಿಕಿತ್ಸೆ ನೀಡುವುದು.

ಹೀಗೆ ಈ ಕಾರ್ಯಕ್ರಮವು ವಿಶೇಷವಾಗಿ ಗ್ರಾಮಿಣ ವಿದ್ಯಾರ್ಥಿಗಳಿಗೆ ಒಂದು ವರವಾಗಿ ಬಂದಿದೆ. ಇದರ ಹಿಂದೆ ಅಡಗಿರುವ ಮೂಲ ಉದ್ದೇಶವೇನೆಂದರೆ ಯಾವುದೇ ಮಗುವು ಕಾಯಿಲೆಯಿಂದಾಗಿ ಗುಣಮಟ್ಟದ ಶಿಕ್ಷಣ ಪಡೆಯುವಲ್ಲಿ ವಂಚಿತರಾಗಬಾರದು.

## ಶಾಲೆಗಳಿಗೆ ಪ್ರತಿ ವರ್ಷ ಸರಬರಾಜು ಆಗುತ್ತಿರುವ ಮಾತ್ರೆಗಳ ವಿವರ;

1 ರಿಂದ 7 ನೇ ತರಗತಿಯ ಸರ್ಕಾರಿ ಹಾಗೂ ಅನುದಾನಿತ ಶಾಲಾ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ ದೊಂದಿಗೆ ಈ ಕೆಳಕಂಡ ಪೌಷ್ಟಿಕಾಂಶ ಮಾತ್ರೆಗಳನ್ನು ಸರಬರಾಜು ಮಾಡಿರುತ್ತಾರೆ.

| ಮಾತ್ರೆಗಳು | | ಪ್ರಮಾಣ |
|---|---|---|
| ವಿಟಮಿನ್ ,ಎ | 2ಲಕ್ಷ ಐ ಯು | ವರ್ಷಕ್ಕೆ 2 ಮಾತ್ರೆಗಳು |
| ಕಬ್ಬಿಣಾಂಶ ಮಾತ್ರೆ | 20 ಎಮ್ ಜಿ | ವಾರಕ್ಕೆ 3 ರಂತೆ 36 ವಾರಗಳಿಗೆ 108 ಮಾತ್ರೆಗಳು |
| ಆಲ್ಬೆಂಡಜೋಲ್ (ಜಂತುಹುಳ ನಿವಾರಕ ಮಾತ್ರೆ) | 400 ಎಮ್ ಜಿ | ವರ್ಷಕ್ಕೆ 2 ಮಾತ್ರೆಗಳು |

## ಆರೋಗ್ಯಕ್ಕೆ ಸಂಬಂಧಿಸಿದ ಕೆಲವು ರೋಗಗಳ ಲಕ್ಷಣಗಳು ಮತ್ತು ತಡೆಗಟ್ಟುವಿಕೆ ;

### ಆಹಾರ ;

ದೈಹಿಕ ಬೆಳವಣಿಗೆ ಶಕ್ತಿ ಮತ್ತು ಆರೋಗ್ಯವನ್ನು ವೃದ್ದಿಸುವ ಆಹಾರವನ್ನು ಸಮತೋಲನ ಆಹಾರ ಎನ್ನುವರು. ಇದರ ಆಭಾವದಿಂದ ಬಲಹೀನತೆ ಉಂಟಾಗುತ್ತದೆ.

ಪ್ರೋಟೀನ್ ದೊರೆಯುವ ಆಹಾರಗಳು ಜೀವಸತ್ವ ಮತ್ತು ಖನಿಜಾಂಶ ಹೊಂದಿರುವ ಆಹಾರ ಬಳಸುವುದರಿಂದ ಸ್ನಾಯುಗಳ ಆರೋಗ್ಯ ಹಾಗೂ ದೇಹದ ಇತರೆ ಭಾಗಗಳು ಬಲಯುತವಾಗುತ್ತವೆ, ಖನಿಜಾಂಶಗಳು, ಆರೋಗ್ಯಕರ ರಕ್ತ, ಮೂಳೆ ಮತ್ತು ಹಲ್ಲುಗಳನ್ನು ಹೊಂದಿರಲು ಹಾಗೂ ಚರ್ಮದ ಆರೋಗ್ಯ ಮತ್ತು ಕಣ್ಣಿನ ದೃಷ್ಠಿ ಉತ್ತಮಪಡಿಸಲು ಕಾರಣವಾಗಿವೆ.

ಹದಿಹರೆಯದ ವಯಸ್ಸಿನಲ್ಲಿ ಅದರಲ್ಲೂ ಹೆಣ್ಣು ಮಕ್ಕಳಲ್ಲಿ ಸಾಮಾನ್ಯವಾಗಿ ರಕ್ತ ಹೀನತೆ (ಅನೀಮಿಯ) ಕಂಡುಬರುತ್ತದೆ, ಪ್ರತೀ 7 ಮಕ್ಕಳಲ್ಲಿ ಒಬ್ಬರಿಗೆ ರಕ್ತ ಹೀನತೆ (ಅನೀಮಿಯ) ಕಂಡುಬರುತ್ತದೆ, ದೇಹದಲ್ಲಿರುವ ಖನಿಜಾಂಶಗಳನ್ನು ಬಳಸಿಕೊಂಡು ಕೆಂಪು ರಕ್ತ ಕಣಗಳು ಆಮ್ಲಜನಕವನ್ನು ದೇಹದ ಜೀವಕೋಶಗಳಿಗೆ ಪೂರೈಸುತ್ತಿವೆ ,ಇದರಿಂದ ದೈಹಿಕ ಮತ್ತು ಮಾನಸಿಕ, ಚಟುವಟಿಕೆಗಳಿಗೆ ಶಕ್ತಿ ದೊರೆಯುತ್ತದೆ.

## ರಕ್ತಹೀನತೆ ;

ರಕ್ತಹೀನತೆ ಅಂದರೆ ಕೆಂಪು ರಕ್ತ ಕಣಗಳಲ್ಲಿ ಹಿಮೋಗ್ಲೋಬಿನ್ ಕಡಿಮೆ ಪ್ರಮಾಣದಲ್ಲಿರುವುದು ಆಗಿರುತ್ತದೆ. ಇದು ಆಮ್ಲಜನಕವನ್ನು ದೇಹದ ಪ್ರತಿಯೊಂದು ಅಂಗಾಂಶಗಳಿಗೆ ಒಯ್ಯಲು ಅವಶ್ಯಕ .

## ರಕ್ತಹೀನತೆಗೆ ಪ್ರಮುಖ ಕಾರಣಗಳು;

1) ಆಹಾರದಲ್ಲಿ ಕಬ್ಬಿಣಾಂಶದ ಕೊರತೆ.
2) ಜಠರದಲ್ಲಿ ಜಂತು ಹುಳು, ಕೊಕ್ಕೆ ಹುಳು, ಲಾಡಿ ಹುಳು, ಕಾರಲು ಹುಳು ಇರುವುದು.
3) ಮಲೇರಿಯಾ / ಆಮಶಂಕೆ.

## ಚಿಹ್ನೆ ಮತ್ತು ಲಕ್ಷಣಗಳು:

1) ಉಗುರು, ನಾಲಿಗೆ, ತುಟಿಯ ಒಳಭಾಗ ಮತ್ತು ಕಣ್ಣಿನ ಕೆಳಭಾಗದ ರೆಪ್ಪೆಯ ಒಳಗಡೆ ಬಿಳಿಚುವುದು.
2) ಬಹಳ ಬೇಗ ಸುಸ್ತಾಗುವುದು (ಆಯಾಸ).
3) ಆಸಕ್ತಿ ಇಲ್ಲದಿರುವುದು (ಉದಾಸೀನ).
4) ಉಸಿರಾಟದ ತೊಂದರೆಯಿಂದ ಎದೆ ಬಡಿತ ಹೆಚ್ಚಾಗುವುದು, ಕೂದಲು ಉದುರುವುದು, ಕೈ ಕಾಲು ಎಳೆತ ಮತ್ತು ಊದಿಕೊಳ್ಳುವುದು.
5) ಮಾನಸಿಕ ರೋಗಗಳು; ವಿಪರೀತ ಸಿಟ್ಟು, ತಲೆನೋವು ಮತ್ತು ಹೆಚ್ಚಾಗಿ ನಿದ್ರೆ ಮಾಡುವುದು .

## ತಡೆಗಟ್ಟುವ ರೀತಿ ;

- ಸಾಕಷ್ಟು ಪ್ರಮಾಣದ ಪೌಷ್ಟಿಕ ಆಹಾರವನ್ನು ಸೇವಿಸುವುದು .
- ಕೊಕ್ಕೆಹುಳ ದೇಹದೊಳಗೆ ಪ್ರವೇಶವಾಗದಂತೆ ಎಚ್ಚರಿಕೆ ವಹಿಸುವುದು **ಉದಾಹರಣೆಗೆ** ಮನೆಯಿಂದ ಹೊರಗೆ ಓಡಾಡುವಾಗ ಪಾದರಕ್ಷೆ ಧರಿಸುವುದು ಏಕೆಂದರೆ ಈ ಹುಳು ಹಿಮ್ಮಡಿ ಮೂಲಕ ದೇಹದೊಳಗೆ ಸೇರುತ್ತವೆ.
- ಋತುಸ್ರಾವ ಅಧಿಕವಾದಾಗ ವೈದ್ಯರ ಸಲಹೆ ಪಡೆಯುವುದು.

## ವೈಯಕ್ತಿಕ ಶುಚಿತ್ವ ;

ರೋಗ ರುಜಿನವಿಲ್ಲದೆ ಆರೋಗ್ಯ ವಾಗಿರುವ ಮಗುವಿನ ವೈಯಕ್ತಿಕ ಶುಚಿತ್ವವು ಆ ಮಗುವಿನ ವ್ಯಕ್ತಿತ್ವ ವಿಕಾಸದ ಸರಿದಾರಿಯಲ್ಲಿ ಸಾಗಿಸುತ್ತದೆ. ರೋಗದಿಂದ ಶಾರೀರಿಕ, ಮಾನಸಿಕ, ನ್ಯೂನತೆಗೆ ತುತ್ತಾಗುವ ಮಕ್ಕಳು ಎಲ್ಲರಂತೆ ದೈನಂದಿನ ಚಟುವಟಿಕೆಗಳಲ್ಲಿ ತೊಡಗಲಾರದೆ ಬೆಳವಣಿಗೆಯಲ್ಲಿ, ಕಲಿಕೆಯಲ್ಲಿ ಹಿಂದುಳಿಯುತ್ತಾರೆ . ಒಳ್ಳೆಯ ಆರೋಗ್ಯ ಒಂದು ಆಕಸ್ಮಿಕವಲ್ಲ, ಪೌಷ್ಟಿಕ ಸಮತೋಲನ ಆಹಾರ ಸೇವನೆಯಲ್ಲಿ ಶಿಸ್ತು, ವೈಯಕ್ತಿಕ ಮತ್ತು ಪರಿಸರ ಸ್ವಚ್ಚತೆ, ಶರೀರಕ್ಕೆ ವ್ಯಾಯಾಮವಾಗುವಂತಹ ಹವ್ಯಾಸಗಳು ( ಆಟ, ನಡಿಗೆ, ಈಜು, ಯೋಗಾಭ್ಯಾಸ ಇತ್ಯಾದಿ ) ಸ್ವಯಂ ನೈರ್ಮಲ್ಯಕ್ಕೆ ಪೂರಕವಾಗಿವೆ.

## ಕೈ ತೊಳೆದುಕೊಳ್ಳುವುದು ;

- ಊಟಕ್ಕೆ ಮೊದಲು ಹಾಗು ಹೊರಗಡೆ ಹೋಗಿ ಬಂದ ನಂತರ ಕೈಯನ್ನು ಸೋಪಿನಿಂದ ತೊಳೆದುಕೊಳ್ಳಲು ಅಭ್ಯಾಸಮಾಡಿಸುವುದು.
- ನಿತ್ಯ ಸ್ನಾನ ಮಾಡಿ ಶುಭ್ರವಾದ ಮಡಿ ಬಟ್ಟೆಯನ್ನು ಧರಿಸುವುದು .
- ಬಾಯಿಯ ಆರೋಗ್ಯ (ಬಾಯಿ ಮತ್ತು ಹಲ್ಲು ) ಪ್ರತಿದಿನ ಎದ್ದ ಕೂಡಲೇ ಹಾಗು ರಾತ್ರಿ ಮಲಗುವ ಮುನ್ನ ಹಲ್ಲನ್ನು ಬಟಾಣಿ ಗಾತ್ರದಷ್ಟು ಪೇಸ್ಟ್ ಹಾಕಿ ಬ್ರಶ್ ನಿಂದ ಹಲ್ಲನ್ನು ಮೇಲಿನಿಂದ ಕೆಳಕ್ಕೆ ಉಜ್ಜುವುದು .ಇದರಿಂದ ಊಟದ ನಂತರ ಹಲ್ಲಿನಲ್ಲಿ ಸಿಕ್ಕಿಹಾಕಿ ಕೊಂಡಿರುವ ಆಹಾರ ಕಣಗಳು ಬಾಯಲ್ಲಿರುವ ಜೊಲ್ಲುರಸದೊಡನೆ ವರ್ತಿಸಿ ಬ್ಯಾಕ್ಟೀರಿಯಗಳ ಉತ್ಪತ್ತಿಯಿಂದ ದಂತ ನೋವು ವಸಡೆ ನೋವು ಹಾಗು ಬಾಯಿ ವಾಸನೆ ಇತ್ಯಾದಿ ಉಂಟು ಮಾಡುತ್ತದೆ. ಬ್ರಶ್ ಮಾಡುವುದರಿಂದ ಇದಕ್ಕೆ ಪರಿಹಾರ ಕಂಡುಕೊಳ್ಳುತ್ತೇವೆ .ಹಾಗು ಉಪ್ಪು ನೀರಿನಿಂದ ಬಾಯನ್ನು ಮುಕ್ಕಳಿಸುವುದು.

## ಪಾದರಕ್ಷೆ ಬಳಕೆ ಮಾಡುವುದು :

ಪಾದರಕ್ಷೆ ಬಳಸುವುದರಿಂದ ಕೊಕ್ಕೆ ಹುಳು, ದೇಹದೊಳಗೆ ಪ್ರವೇಶವಾಗುವುದನ್ನು ತಡೆಗಟ್ಟಬಹುದು.

## ಉಗುರಿನ ಶುಚಿತ್ವ ;

ಯಾವಾಗಲು ಉಗುರು ಬೆಳೆಯದಂತೆ ಕತ್ತರಿಸಬೇಕು, ಉಗುರಿನಲ್ಲಿ ಕೊಳೆ ನಿಲ್ಲದಂತೆ ಎಚ್ಚರಿಕೆ ವಹಿಸಬೇಕು. ಇದರಿಂದಾಗಿ ಆಹಾರ ಸೇವನೆ ಯೊಡನೆ ದೇಹದೊಳಗೆ ರೋಗಾಣುಗಳು ಪ್ರವೇಶವಾಗುವುದನ್ನು ತಡೆಯಬಹುದಾಗಿದೆ.

## ತಲೆಕೂದಲಿನ ಶುಚಿತ್ವ;

ಪ್ರತಿದಿನ ತಲೆ ಸ್ನಾನ ಮಾಡುವುದರಿಂದ ತಲೆಹೊಟ್ಟು ಕಡಿಮೆಯಾಗುವುದು. ಕಣ್ಣಿನ ಆರೋಗ್ಯಕ್ಕಾಗಿ ತಲೆಗೆ ಎಣ್ಣೆ ಹಚ್ಚುವುದು, ಈ ಎಣ್ಣೆಯು ತಲೆಯಲ್ಲಿ ಕನಿಷ್ಟ 2 – 3 ಘಂಟೆಗಳ ಕಾಲ ಉಳಿಯುವಂತೆ ಮಾಡಿ, ಆಮೇಲೆ ತಲೆ ಸ್ನಾನ ಮಾಡುವುದು. ಕೂದಲನ್ನು ಚೆನ್ನಾಗಿ ಬಾಚಿಕೊಳ್ಳುವುದು.

## ಆಹಾರ ಹಾಗು ನೀರಿನ ಶುಚಿತ್ವ ;

ಶಾಲೆಗಳಲ್ಲಿ ಅಥವಾ ಮನೆಗಳಲ್ಲಿ ಊಟ ತಿಂಡಿಯನ್ನು ಮುಚ್ಚಿಡುವುದು, ಪಾತ್ರೆಗಳ ಶುಚಿತ್ವ, ನೀರು ತೆಗೆಯುವಾಗ ಕೈಗಳನ್ನು ನೀರಿನಲ್ಲಿ ಮುಳುಗಿಸದೆ ಲೋಟದಿಂದ ನೀರನ್ನು ಎತ್ತಿ ಕುಡಿಯುವ ರೂಢಿ ಹಾಗು ಕುದಿಸಿ ಆರಿಸಿದ ನೀರಿನ ಬಳಕೆ ಮಾಡುವುದು. ಮತ್ತೆ ಬೀದಿ ಮಾರಾಟದ ಪದಾರ್ಥಗಳನ್ನು ನಿಷೇಧಿಸುವುದು.

## ಪ್ರಾಪ್ತ ವಯಸ್ಕರಾದಾಗ ಶುಚಿತ್ವ;

- ಹೆಣ್ಣು ಮಕ್ಕಳು ಮೂತ್ರ ವಿಸರ್ಜನೆ ಮಾಡಿದ ಮೇಲೆ ನೀರಿನಿಂದ ತೊಳೆದುಕೊಳ್ಳುವುದು, ಸಾಬೂನು ಬಳಸುವುದು ಅಪೇಕ್ಷಣೀಯ .
- ಶುಭ್ರವಾದ ಒಳ ಉಡುಪುಗಳನ್ನು ದಿನಕ್ಕೊಮ್ಮೆ ಬದಲಿಸುವುದು.
- ಒಳ ವಸ್ತ್ರವನ್ನು ತೊಳೆದು ಬಿಸಿಲಿನಲ್ಲಿ ಒಣಗಿಸಿ ಧರಿಸುವುದರಿಂದ ಆಗುವ ಅನುಕೂಲತೆಯ ಬಗ್ಗೆ ತಿಳಿಸಬೇಕು.
- 

## ಅಂಟು ರೋಗಗಳು ;

ರೋಗಾಣುಗಳು ರೋಗದಿಂದ ಬಳಲುವ ವ್ಯಕ್ತಿಯಿಂದ ಆರೋಗ್ಯವಂತ ವ್ಯಕ್ತಿಗೆ ಸೊಂಕಿನ ಮೂಲಕ ಬರುತ್ತದೆ . ಸೂಕ್ಷ್ಮಾಣುಗಳಾದ ಬ್ಯಾಕ್ಟೀರಿಯ ವೈರಸ್ ಗಳ ಮೂಲಕ ವ್ಯಕ್ತಿಯಿಂದ ವ್ಯಕ್ತಿಗೆ ಹರಡುತ್ತದೆ. ಇದನ್ನು ಅಂಟುರೊಗ ಅಥವಾ ಸೊಂಕು ರೋಗಗಳು ಎನ್ನುವರು, ಇವು ಗಾಳಿ, ನೀರು, ಆಹಾರ ಮತ್ತು ಕೀಟಗಳ ಮೂಲಕ ಹರಡುತ್ತವೆ, ನೆಗಡಿ, ಚರ್ಮ ರೋಗಗಳು ಸಾಂಕ್ರಾಮಿಕ ರೋಗಗಳು ಕುಷ್ಟ ರೋಗ ಇತ್ಯಾದಿ...

**ಸ್ಕೇಬಿಸ್ (ಕಜ್ಜಿ ) ಮತ್ತು ಚರ್ಮದ ರೋಗ ;** ಮಕ್ಕಳಲ್ಲಿ ಸಾಮಾನ್ಯವಾಗಿ ಕಾಣಿಸಿಕೊಳ್ಳುವ ಕಜ್ಜಿಯು ಒಂದು ಬಗೆಯ ಸಣ್ಣ ಕ್ರಿಮಿಯಿಂದ (ಬ್ಯಾಕ್ಟೀರಿಯಾ) ಬರುತ್ತದೆ. ಇದು ಅಂಟುರೋಗವಾಗಿದ್ದು ಒಬ್ಬರಿಂದ ಇನ್ನೊಬ್ಬರಿಗೆ ಸಂಪರ್ಕದಿಂದ ಬರುತ್ತದೆ, ಅಲ್ಲದೆ ರೋಗಿಯು ಉಪಯೋಗಿಸುವ ಉಡುಪುಗಳನ್ನು ಮತ್ತೊಬ್ಬರು ಬಳಸುವುದರಿಂದ ಬರುತ್ತದೆ, **ಉದಾಹರಣೆಗೆ** ಕರವಸ್ತ್ರ , ಹೊದಿಕೆ, ಬಟ್ಟೆ ಇತ್ಯಾದಿ .

### ಸ್ಕೇಬಿಸ್ (ಕಜ್ಜಿ ) ಲಕ್ಷಣಗಳು ;

ಈ ಹುಳುಗಳು ಚರ್ಮವನ್ನು ಕೊಳೆಸುತ್ತವೆ, ಅಲ್ಲದೆ ಇದರ ಪರಿಣಾಮವಾಗಿ;

- ಚರ್ಮ ಕೆಂಪಾಗುವುದು.
- ತುಂಬಾ ತುರಿಕೆ, ಉರಿ, ನಿದ್ರಾ ಹೀನತೆ .
- ಸಣ್ಣ ಗಾಯವಾಗಿ ಸೋಂಕಾಗಿ ಪರಿವರ್ತಿತವಾಗಬಹುದು, ಹುಣ್ಣಿನಿಂದ ನೀರು ಅಥವಾ ಕೀವು ಹೊರಬರುವುದು.
- ಸಾಮಾನ್ಯವಾಗಿ ಬೆರಳುಗಳ ನಡುವಿನ ಭಾಗ ಮಣಿಕಟ್ಟಿನ ಸುತ್ತಮುತ್ತ, ಕಂಕುಳಲ್ಲಿ, ಹೊಕ್ಕಳು ಹಾಗು ಸೊಂಟದ ಸುತ್ತಮುತ್ತ ತೊಡೆಭಾಗದಲ್ಲಿ ಕಜ್ಜಿ ಹೆಚ್ಚಾಗಿ ಕಂಡುಬರುವುದು.

### ತಡೆಗಟ್ಟುವ ರೀತಿ;

- ರೋಗಿಯು ಉಪಯೋಗಿಸುವ ಬಟ್ಟೆಗಳನ್ನು ಬಿಸಿ ಬಿಸಿ ನೀರಿನಲ್ಲಿ ತೊಳೆದು ಬಿಸಿಲಿನಲ್ಲಿ ಒಣಗಿಸುವುದು.
- ಮನೆಯವರು ಎಚ್ಚರಿಕೆ ವಹಿಸಿ ರೋಗ ನಿರೋಧಕಗಳನ್ನು ಬಳಸುವುದು.
- ವೈದ್ಯರು ಸೂಚಿಸಿದ ಮುಲಾಮು ಉಪಯೋಗಿಸುವುದು.

ಇಂತಹ ಸಮಸ್ಯೆಗಳಿಗೆ ತಪಾಸಣಾಧಿಕಾರಿ ಅಂದರೆ ವೈದ್ಯರು ಭೇಟಿ ನೀಡಿದಾಗ ಮಾರ್ಗೋಪಾಯವನ್ನು ತಿಳಿಸಿ, ಬರೆದು ಕೊಟ್ಟ ಮಾತ್ರೆ / ಔಷಧಿಗಳನ್ನು ಸೇವಿಸುವುದು, ಅಥವಾ ಗಂಭೀರವೆನಿಸಿದಲ್ಲಿ ಸೂಕ್ಷ್ಮವಾಗಿ ಪರೀಕ್ಷಿಸಲು ಆಸ್ಪತ್ರೆಗೆ ಬರಲು ತಿಳಿಸುವರು.

ಇದಲ್ಲದೆ ಇನ್ನಷ್ಟು ತೀವ್ರತೆಯಿಂದ ನರಳುವ ಕಾಯಿಲೆಗಳಿವೆ ಅವು....

**1. ದೃಷ್ಟಿ ದೋಷ ಅಥವಾ ದೃಷ್ಟಿಯಲ್ಲಿ ತೊಂದರೆಯ ಲಕ್ಷಣಗಳು.**

- ಕಣ್ಣುಗಳು ಕೆಂಪಾಗಿ ಸದಾ ಕಣ್ಣೀರು ಬರುವುದು.
- ವಿಪರೀತವಾಗಿ ಕಣ್ಣನ್ನು ಉಜ್ಜುವುದು, ಒಂದು ಅಥವಾ ಎರಡು ಕಣ್ಣಿನ ಪಾಪೆ ಬೂದು ಅಥವ ಬೆಳ್ಳಗಿರುವುದು.
- ರೂಢಿಯಿಲ್ಲದ ಸ್ಥಳಗಳಲ್ಲಿ ಎಡುವುದು ಅಥವ ಬೀಳುವುದು.
- ಒಂದು ಕಣ್ಣನ್ನು ಮುಚ್ಚಿಕೊಳ್ಳುವುದು.
- ತಲೆಯನ್ನು ಒಂದು ಪಕ್ಕಕ್ಕೆ ಅಥವ ಮುಂದಕ್ಕೆ ಬಾಗಿಸುವುದು,

- ಕಣ್ಣನ್ನು ಪದೇ ಪದೇ ಮಿಟುಕಿಸುವುದು.
- ವಸ್ತುಗಳನ್ನು ನೋಡುವಾಗ ಹುಬ್ಬು ಗಂಟಿಕ್ಕುವುದು.
- ಪುಸ್ತಕವನ್ನು ಹತ್ತಿರ ಅಥವಾ ದೂರ ಹಿಡಿದು ಓದುವುದು.
- ಕಪ್ಪು ಹಲಗೆ ಸಮೀಪವೇ ಕುಳಿತುಕೊಳ್ಳುವುದು, ಕಾಣಿಸುವುದಿಲ್ಲ ಎಂದು ಹೇಳುವುದು.
- ದೂರದೃಷ್ಟಿ ದೋಷ ಹೊಂದಿರುವವರು ನಿರ್ದಿಷ್ಟ ವಿಷಯದತ್ತ ಕೇಂದ್ರಿಕರಿಸುವುದಿಲ್ಲ .
- ಇರುಳುಗಣ್ಣಿನ ದೋಷ.

## 2. ಶ್ರವಣ ದೋಷ ;

- ಕೇಳಿಸಿಕೊಳ್ಳುವ ಕ್ರಿಯೆಯಲ್ಲಿ ಆದ ಹಾನಿ.
- ಮಾತು ಮತ್ತು ಭಾಷಾ ಬೆಳವಣಿಗೆಯಲ್ಲಿ ತೊಂದರೆ.
- ಮಾನಸಿಕವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಹಿಂದುಳಿಯುವರು.

**ಶಿಕ್ಷಕರು ಶ್ರವಣ ಶಕ್ತಿ ತೊಂದರೆಯ ಮಕ್ಕಳನ್ನು ಗುರುತಿಸಲು ಈ ಕೆಳಕಂಡ ಅಂಶಗಳನ್ನು ಗಮನಿಸಬೇಕು ....**

- ಕಿವಿನೋವು, ಕಿವಿಸೋರುವಿಕೆಯಿಂದ ನರಳುತ್ತಾರೆ.
- ಮಾತನಾಡುವಾಗ ಕೆಲವು ಮಾತಿನ ಶಬ್ದಗಳನ್ನು ಬಿಟ್ಟು ಬಿಡುವುದು.
- ಪ್ರಶ್ನೆ ಕೇಳಿದಾಗ ಅರ್ಥವಾಗದೇ ಪದೇ ಪದೇ ಹೇಳುವಂತೆ ಕೇಳುವುದು.
- ಮಾತನಾಡುವಾಗ ಮುಖವನ್ನೇ ಗಮನಿಸುವುದು.
- ಅತೀ ಗಟ್ಟಿಯಾಗಿ ಅಥವಾ ಮೆಲ್ಲನೆ ಮಾತನಾಡುವರು.
- ಮಾತನಾಡುವ ಧ್ವನಿ ಎಲ್ಲಿಂದ ಬಂದಿತು ಎಂದು ತಿಳಿಯಲು ಸುತ್ತ ಮುತ್ತ ನೋಡುವುದು.

## 3. ಮಾತಿನ ದೋಷ;

- ಮಾತಿನ ತೊಂದರೆ.
- ಮಾತು ಬಾರದೇ ಇರುವುದರಿಂದ ಬೇರೆ ಮಕ್ಕಳೊಡನೆ ಬೆರೆಯದೇ ಇರುವುದು.
- ಹೆಚ್ಚು ಮೌನವಾಗಿ ಇರುವುದು.
- ಉಚ್ಚಾರಣೆ ಸ್ಪಷ್ಟವಿಲ್ಲದಿರುವುದು.
- ತೊದಲುವಿಕೆ / ಉಗ್ಗರಿಸಿ ಮಾತನಾಡುವುದು.
- ದಪ್ಪ ನಾಲಿಗೆ ಹೊಂದಿರುವುದು.
- ಮಾತನಾಡಲು ಹಿಂಜರಿಕೆ ಮತ್ತು ಭಯ ಹೊಂದಿರುವುದು.
- ಸೀಳು ತುಟಿ ಮತ್ತು ಕಿರು ನಾಲಗೆ ಇಲ್ಲದ ಮಕ್ಕಳು.

## 4. ದೈಹಿಕ ದೋಷ;

- ಅಂಗಾಂಗ ಮತ್ತು ಮಾತಿನ ಬೆಳವಣಿಗೆ ಕುಂಠಿತವಾಗುವುದು.
- ಓಡಾಡಲು ತೊಂದರೆ.
- ಸ್ನಾಯುಗಳ ಬಿಗಿತ.
- ಅನೈಚ್ಛಿಕ ಚಲನೆ.
- ಅನಿಯಂತ್ರಿತ ಚಲನೆ.

## 5. ಬುದ್ಧಿ ಮಾಂದ್ಯತೆ;

- ಮಿತಿಯುಳ್ಳ ಬುದ್ಧಿ ಶಕ್ತಿ ಹೊಂದಿರುವುದು.
- ಜ್ಞಾಪಕ ಶಕ್ತಿ ,ಏಕಾಗ್ರತೆ ಶಕ್ತಿ ಕಡಿಮೆ.
- ವಿಳಂಬವಾದ ಬೆಳವಣಿಗೆ.

## 6. ಬಹು ವಿಕಲತೆ;

- ಒಂದಕ್ಕಿಂತ ಹೆಚ್ಚು ಅಂಗವಿಕಲತೆಯನ್ನು ಹೊಂದಿರುವ ಮಕ್ಕಳು.
- ದೈಹಿಕ ನ್ಯೂನತೆ ಮತ್ತು ದೃಷ್ಠಿ ನ್ಯೂನತೆ.
- ಶ್ರವಣ ಮತ್ತು ದೃಷ್ಠಿ ನ್ಯೂನತೆ.
- ಪಾರ್ಶ್ವವಾಯು ಮತ್ತು ಬುದ್ದಿ ಮಾಂದ್ಯತೆ.
- ಬುದ್ದಿ ಮತ್ತು ಮಾತಿನ ವಿಕಲತೆ.
- ಶ್ರವಣ ಮತ್ತು ದೈಹಿಕ ನ್ಯೂನತೆ.

## 7. ಕಲಿಕಾ ದೋಷವಿರುವ ಮಕ್ಕಳ ಲಕ್ಷಣಗಳು;

- ಕಲಿಕಾ ದೋಷವಿರುವ ಮಕ್ಕಳಿಗೆ ನಿರ್ದಿಷ್ಟ ಕಲಿಕಾ ಕ್ರಿಯೆಯಲ್ಲಿ ತೊಂದರೆಯಿರುತ್ತದೆ **ಉದಾಹರಣೆಗೆ** ಓದು – ಬರಹ , ಕಾಗುಣಿತ , ಲೆಕ್ಕ ಇತ್ಯಾದಿ...
- ಇವರಿಗೆ ಸಮಯ, ದಿನ, ತಿಂಗಳು, ಋತು ಮತ್ತು ಮಗ್ಗಿಯನ್ನು, ಕ್ರಮವಾಗಿ ಹೇಳುವಾಗ ತೊಂದರೆ.
- ಎಡ– ಬಲ, ಮುಂದೆ– ಹಿಂದೆ, ಮೇಲೆ– ಕೆಳಗೆ, ಇವುಗಳ ಬಗ್ಗೆ ಗೊಂದಲ.
- ಸೂಚನೆಗಳನ್ನು ಪಾಲಿಸುವಂತೆ ಹೇಳಿದಾಗ, ಮತ್ತೊಮ್ಮೆ ಹೇಳುವಂತೆ ಕೇಳುವುದು.
- ಶೈಕ್ಷಣಿಕ ವಿಷಯಗಳಲ್ಲಿ ತೊಂದರೆ, ಕೆಲವೊಮ್ಮೆ ಒಂದು ವಿಷಯದಲ್ಲಿರಬಹುದು ಅಥವಾ ಎರಡು, ಮೂರು ವಿಷಯಗಳಲ್ಲಿ.
- ಏಕಾಗ್ರತೆ ಕಡಿಮೆ.

## 8. ಮೆದುಳಿನ ಪಾರ್ಶ್ವವಾಯು (ಸೆರೆಬ್ರಲ್ ಪಾಲ್ಸಿ) ;

- ಕೈ ಕಾಲು ಬೆರಳುಗಳು ತಿರುಚಿರುವುದು.
- ಕೈ, ಕಾಲುಗಳು, ಮೂಳೆಗಳು ಮಡಿಚಲು ಆಗದೇ ಸೊಟ್ಟಾಗಿರುವುದು.
- ಕತ್ತು ನೇರ ವಲ್ಲದೆ ಎಡ – ಬಲ, ಮುಂದಕ್ಕೆ – ಹಿಂದಕ್ಕೆ ಜೋತು ಬಿದ್ದಿರುವುದು.
- ತೆವಳುತ್ತಾ ಮುಂದೆ ಸಾಗುವುದು.
- ಬಾಯಿಯಲ್ಲಿ ಜೊಲ್ಲು ಸುರಿಸುತ್ತಾ ಬಾಯಿ ತೆರೆದು ಕರ್ಕಶ ಧ್ವನಿ ಮಾಡುವುದು.
- ಮಗು ಮಲಗಿದ್ದಲ್ಲಿಯೇ, ಕೂತಿದ್ದಲ್ಲಿಯೇ ಕೂರುವುದು.

## 9. ಆಟಿಸಂ ;

- ಸ್ವ–ಲೀನತೆ ಇರುವುದು.
- ಒಂದೇ ಚಟುವಟಿಕೆಯಲ್ಲಿ ಹೆಚ್ಚು ತೊಡಗುವುದು.
- ಸದಾ ಏಕಾಂಗಿಯಾಗಿರುವುದು.
- ಬೇಗನೇ ಉದ್ವೇಗಗೊಳ್ಳುವುದು.
- ಅತೀ ಚಟುವಟಿಕೆಯಿಂದ ಕೂಡಿರುವುದು.
- ತನ್ನಿಷ್ಟಕ್ಕೆ ತಾನೆ ಮಾತನಾಡುವುದು.
- ವಿಚಿತ್ರ ರೀತಿಯ ಧ್ವನಿ ಮಾಡುವುದು.

# ಅಧ್ಯಾಯ -4

## 4.1 - ಅಧ್ಯಯನದ ಉದ್ದೇಶಗಳು ;

1. ಮಕ್ಕಳ ತಪಾಸಣೆಯ ಆಯಾಮಗಳನ್ನು ತಿಳಿದುಕೊಳ್ಳುವುದು.
2. ಮಕ್ಕಳ ಬೆಳವಣಿಗೆಗಾಗಿ ಕಾಲಕಾಲಕ್ಕೆ ನೀಡುವಂತಹ ಮಾತ್ರೆಗಳನ್ನು ಸೂಕ್ತ ಸಮಯಕ್ಕೆ ನೀಡುತ್ತಿದ್ದಾರೆಯೆ? ಎಂದು ಖಾತ್ರಿಪಡಿಸಿಕೊಳ್ಳುವುದು.
3. ವೈದ್ಯರು ಕಾಲಕಾಲಕ್ಕೆ ಭೇಟಿ ನೀಡಿ ಸೂಕ್ತ ಸಲಹೆ ಮತ್ತು ಮಾರ್ಗದರ್ಶನ ನೀಡುತ್ತಿದ್ದಾರೆಯೆ? ಎಂದು ಖಾತ್ರಿಪಡಿಸಿಕೊಳ್ಳುವುದು .
4. ವೈದ್ಯಕೀಯ ತಪಾಸಣೆಯಿಂದ ನ್ಯೂನತೆಯುಳ್ಳ ಮಕ್ಕಳ ಮೇಲೆ ಬೀರಿದ ಪ್ರಭಾವವನ್ನು ತಿಳಿದುಕೊಳ್ಳುವುದು.
5. ನಮ್ಮ ಶೈಕ್ಷಣಿಕ ಆಶಯಗಳಾದ ಸಾರ್ವತ್ರಿಕ ದಾಖಲಾತಿ, ಹಾಜರಾತಿ, ಉಳಿಕೆ ಮತ್ತು ಕಲಿಕೆಯ ಮೇಲಾಗಿರುವ ಪರಿಣಾಮಗಳನ್ನು ಈ ಕಾರ್ಯಕ್ರಮದೊಂದಿಗೆ ತುಲನೆಮಾಡುವುದು.

## 4.2 ಅಧ್ಯಯನದ ವಿನ್ಯಾಸ ;

| ಕ್ರಮ ಸಂಖ್ಯೆ | ಚಟುವಟಿಕೆ | ಭಾಗೀದಾರರು | ಸಾಮಗ್ರಿಗಳು | ಕಾಲಮಿತಿ |
|---|---|---|---|---|
| 1 | ಪ್ರಸ್ತಾವನೆ ಸಲ್ಲಿಕೆ | ನಾನು | ಪೇಪರ, ಪೆನ, ಡಿ,ಟಿ,ಪಿ. | ಸೆಪ್ಟೆಂಬರ್-15 |
| 2 | ಪೂರ್ವಭಾವಿ ಸಿದ್ದತೆ | ನಾನು | ಮಾಹಿತಿ ಸಂಗ್ರಹಣೆಗಾಗಿ ಪುಸ್ತಕಗಳು, ಪೇಪರ್, ಪೆನ, | ಅಕ್ಟೋಬರ್-15 |
| 3 | ಸಾಧನಗಳ ಸಿದ್ದಪಡಿಸುವಿಕೆ | ನಾನು | ಪೇಪರ್, ಪೆನ್,ಡಿ,ಟಿ,ಪಿ | ನವೆಂಬರ್ & ಡಿಸೆಂಬರ್-15 |
| 4 | ದತ್ತಾಂಶಗಳ ಸಂಗ್ರಹಣೆಗೆ ಭೇಟಿ | ನಾನು, ಸಿ,ಆರ್,ಪಿ, ಮುಖ್ಯ,ಶಿಕ್ಷಕರು,ಮಕ್ಕಳು | ಪ್ರಶ್ನಾವಳಿಗಳು, ಛಾಯಾ ಚಿತ್ರಗಳು. | ಜನವರಿ ಮತ್ತು ಫೆಬ್ರುವರಿ-16 |
| 5 | ವರದಿ ಸಲ್ಲಿಸುವಿಕೆ | ನಾನು | ಪೇಪರ್, ಪೆನ್, ಫೊಟೊ, ಡಿ,ಟಿ,ಪಿ, ಬೈಂಡಿಂಗ್ | ಫೆಬ್ರುವರಿ-16 |

### ಅಧ್ಯಯನಕ್ಕೆ ಬಳಸಿದ ಸಾಧನಗಳು;

- ಪ್ರಶ್ನಾವಳಿ.
- ಅವಲೋಕನ ಪಟ್ಟಿ.
- ಛಾಯಾ ಚಿತ್ರಗಳು.

### ಅಧ್ಯಯನಕ್ಕೆ ಬಳಸಿದ ತಂತ್ರ ಗಳು;

1. ಅವಲೋಕನ.
2. ಛಾಯಾ ಚಿತ್ರಗಳು.
3. ಪ್ರಶ್ನಾವಳಿಗಳು.

## 4.3 ಅಧ್ಯಯನದ ವ್ಯಾಪ್ತಿ;

ಮಕ್ಕಳ ಆರೋಗ್ಯ ತಪಾಸಣೆ ಅಧ್ಯಯನವು ಕೇವಲ ಶಿವಮೊಗ್ಗ ಜಿಲ್ಲೆಯ ಏಳು ಬ್ಲಾಕ್ ಗಳಾದ ಶಿವಮೊಗ್ಗ, ಭದ್ರಾವತಿ, ಸಾಗರ, ಸೊರಬ, ಹೊಸನಗರ, ತೀರ್ಥಹಳ್ಳಿ ಮತ್ತು ಶಿಕಾರಿಪುರದ ಆಯ್ದ ಪ್ರತಿದರ್ಶಿ 70 ಶಾಲೆಗಳಿಗೆ ಮಿತಿಗೊಳಿಸಲಾಗಿದೆ .

**ಪ್ರತಿಚಯನ;** ನನ್ನ ಪ್ರತಿಚಯನವು ಶಿವಮೊಗ್ಗ ಜಿಲ್ಲೆಯ ಏಳು ತಾಲ್ಲೂಕಿನ ಆಯ್ದ ಕ್ಲಸ್ಟರ್ ಗಳ 70ಶಾಲೆಗಳಾಗಿರುತ್ತವೆ.

## 4.4 ದತ್ತಾಂಶಗಳ ಸಂಗ್ರಹಣೆ ;

ದತ್ತಾಂಶಗಳನ್ನು ಜಿಲ್ಲೆಯ 70 ಪ್ರತಿದರ್ಶಿ ಶಾಲೆಗಳಲ್ಲಿ ವೀಕ್ಷಣೆಯನ್ನಾಧರಿಸಿ, ಅವಲೋಕನ, ಛಾಯಾಚಿತ್ರಗಳು ಹಾಗೂ ಪ್ರಶ್ನಾವಳಿಗಳನ್ನಾಧರಿಸಿ ಸರ್ವೆ ಮುಖಾಂತರ ಸಂಗ್ರಹಿಸಲಾಗಿದೆ .

# ಅಧ್ಯಾಯ –5

## ದತ್ತಾಂಶಗಳ ವಿಶ್ಲೇಷಣೆ;


ಆರ್, ಇ, ಎಂ, ಎಸ್ ಮಧ್ಯವರ್ತನೆಯಡಿಯಲ್ಲಿ ಮಕ್ಕಳ ಆರೋಗ್ಯ ತಪಾಸಣೆಯ ಪರಿಣಾಮಕಾರಿತ್ವವನ್ನು ಪ್ರಶ್ನಾವಳಿಗಳ ಮೂಲಕ ಸಂಗ್ರಹಿಸಿದ ದತ್ತಾಂಶಗಳ ವಿಶ್ಲೇಷಣೆಯ ಅಂಶಗಳು ಕೆಳಕಂಡಂತಿವೆ.

1) ಪ್ರಶ್ನಾವಳಿಯ ಮೊದಲ ಭಾಗದಲ್ಲಿ ಶಾಲೆಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿಗಳಾದ ಶಾಲೆಯ ಹೆಸರು, ಹಿರಿಯ ಪ್ರಾಥಮಿಕ ಶಾಲೆ / ಕಿರಿಯ ಪ್ರಾಥಮಿಕ ಶಾಲೆ, ಇ, ಎಮ್, ಐ, ಎಸ್, ಕೋಡ್, ಸಂಬಂಧಿಸಿದ ಕ್ಲಸ್ಟರ್ ಹೆಸರು, ಬ್ಲಾಕ್ ಹೆಸರು, ಶಾಲೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಶಿಕ್ಷಕರ ಸಂಖ್ಯೆ ಇವುಗಳನ್ನು ತಿಳಿದುಕೊಳ್ಳಲಾಯಿತು.
2) ಎರಡನೇ ಭಾಗದ ಮೊದಲನೆಯ ಪ್ರಶ್ನೆಯಲ್ಲಿ ಶಾಲೆಗೆ ದಾಖಲಾದ ಮಕ್ಕಳ ವಿವರವನ್ನಾಧರಿಸಿ ಅಂದರೆ ಮಕ್ಕಳ ದಾಖಲಾತಿ, ಹಾಜರಾತಿ, ಪ್ರತ್ಯೇಕವಾಗಿ ಗಂಡು ಮತ್ತು ಹೆಣ್ಣು ಮಕ್ಕಳ ವಿವರವನ್ನು ಪಡೆಯಲಾಗಿದೆ.

ಈ ಮಾಹಿತಿಯು ಸರ್ಕಾರದಿಂದ ನಿಗದಿಪಡಿಸಿರುವ ಆರೋಗ್ಯ ತಪಾಸಣೆಗೆ ಎಷ್ಟು ಮಕ್ಕಳು ಒಳ ಪಡುತ್ತಾರೆ ಎಂಬುವ ಸ್ಪಷ್ಟೀಕರಣವನ್ನಾಧರಿಸಿ ಕೇಳಲಾಗಿತ್ತು ,ಇದರಿಂದ ತಿಳಿದು ಬಂದದ್ದೇನೆಂದರೆ ಶಾಲೆಗೆ ದಾಖಲಾಗುವ ಎಲ್ಲಾ ಮಕ್ಕಳು ಈ ಕಾರ್ಯಕ್ರಮಕ್ಕೆ ಒಳಪಡುತ್ತಾರೆ.

ಕೆಳಗೆ ನೀಡಿರುವ ಪಟ್ಟಿಯು ನನ್ನ ಪ್ರತಿಚಯನದ ತಪಾಸಣೆಗೆ ಒಳಪಟ್ಟ ಮಕ್ಕಳ ಅಂಕಿ ಅಂಶಗಳನ್ನು ತಿಳಿಸುತ್ತದೆ.

| ಕ್ರಮ ಸಂಖ್ಯೆ | ತಾಲ್ಲೂಕಿನ ಹೆಸರು | ಕ್ಲಸ್ಟರ್ ಹೆಸರು | ತಪಾಸಣೆಯಲ್ಲಿ ಪಾಲ್ಗೊಂಡ ಮಕ್ಕಳು. | ತಪಾಸಣೆಯಿಂದ ವಂಚಿತರಾಗಿರುವ ಮಕ್ಕಳು. |
|---|---|---|---|---|
| 1 | ಶಿವಮೊಗ್ಗ | ಸಿರಿಗೆರೆ<br>ನಿಧಿಗೆ<br>ಮಂಡಘಟ್ಟ<br>ಗಾಡಿಕೊಪ್ಪ | 320<br>140<br>14<br>206 | --<br>10<br>86<br>70 |
| 2 | ಭದ್ರಾವತಿ | ಬಿ,ಆರ್,ಪಿ<br>ನಗರ-1<br>ಅಗರದಹಳ್ಳಿ<br>ಜಯಶ್ರಿವೃತ್ತ<br>ಬೊಮ್ಮನಕಟ್ಟೆ | 312<br>248<br>59<br>130<br>45 | 33<br>27<br>--<br>13<br>05 |
| 3 | ಹೊಸನಗರ | ನಿಟ್ಟೂರು<br>ನಗರ<br>ಅಲಗೇರಿಮಂಡ್ರಿ<br>ಮಾರುತೀಪುರ<br>ಹೊಸನಗರ<br>ಕೋಡೂರು<br>ಮೂಗುಡ್ತಿ<br>ಕಮ್ಮಚ್ಚಿ<br>ಬ್ರಹ್ಮೇಶ್ವರ | 33<br>47<br>136<br>71<br>22<br>91<br>44<br>30<br>84 | 03<br>01<br>--<br>--<br>--<br>--<br>09<br>01<br>09 |
| 4 | ತೀರ್ಥಹಳ್ಳಿ | ಮಂಡಗದ್ದೆ<br>ಹಿರೇಗದ್ದೆ<br>ಗುಡ್ಡೇಕೊಪ್ಪ<br>ಕೋಣಂದೂರು<br>ತೀರ್ಥಹಳ್ಳಿ<br>ಕುಡುಮಲ್ಲಿಗೆ | 114<br>68<br>98<br>61<br>29<br>87 | 13<br>--<br>01<br>06<br>--<br>09 |
| 5 | ಸಾಗರ | ತಾಳಗೊಪ್ಪ<br>ಬೆಳಲಮಕ್ಕಿ<br>ಸೈದೂರು | 54<br>365<br>270 | --<br>18<br>03 |
| 6 | ಸೊರಬ | ಪಿ,ಡಬ್ಲ್ಯೂ,ಡಿ ಕಾಲೊನಿ<br>ಹೊಸಬಾಳೆ<br>ಬೆನ್ನೂರು | 405<br>195<br>227 | 47<br>04<br>16 |
| 7 | ಶಿಕಾರಿಪುರ | ಬೇಗೂರು<br>ಅಂಬಾರಗೊಪ್ಪ<br>ಕಪ್ಪನಹಳ್ಳಿ<br>ತೊಗರ್ಸಿ<br>ಬಿಳಕಿ<br>ನೆಲವಾಗಿಲು. | 190<br>149<br>202<br>151<br>36<br>58 | --<br>36<br>14<br>09<br>05<br>04 |
| | ಒಟ್ಟು | | 4791 | 452 |




ಸದರಿ ಸ್ತಂಭ ಲೇಖದಿಂದ ತಿಳಿದು ಬರುವುದೇನೆಂದರೆ ನಾನು ಆಯ್ಕೆ ಮಾಡಿಕೊಂಡ 70 ಪ್ರತಿದರ್ಶಿ ಶಾಲೆಗಳಲ್ಲಿ ಒಟ್ಟು 4791 ಮಕ್ಕಳು ತಪಾಸಣೆಗೆ ಒಳಪಡುತ್ತಾರೆ ಹಾಗು 452 ಮಕ್ಕಳು ತಪಾಸಣೆಯ ದಿನದಂದು ಗೈರುಹಾಜರಿರುವ ಪ್ರಯುಕ್ತ ತಪಾಸಣೆಯಿಂದ ವಂಚಿತರಾಗಿರುತ್ತಾರೆ.

3) ಆರೋಗ್ಯ ತಪಾಸಣೆಯನ್ನು ಶಾಲೆಗಳಲ್ಲಿ ಜುಲೈ ರಿಂದ ಡಿಸೆಂಬರ್ ವರೆಗಿನ ಶೈಕ್ಷಣಿಕ ಅವಧಿಯಲ್ಲಿ ಹಮ್ಮಿಕೊಂಡಿರುತ್ತಾರೆ ಹಾಗು ಶಿಕ್ಷಕರು ಮಕ್ಕಳ ನ್ಯೂನತೆಯನ್ನು ಗುರುತಿಸಿಕೊಂಡಿರುತ್ತಾರೆ.

ಈ ನ್ಯೂನತೆಗಳು ವಿವಿಧ ಶಾಲೆಗಳಲ್ಲಿ ಹೀಗಿವೆ. ಕಣ್ಣಿನ ತೊಂದರೆ, ದೃಷ್ಠಿ ದೋಷ, ಚರ್ಮಕ್ಕೆ ಸಂಬಂಧಿಸಿದ ತೊಂದರೆ, ಹೃದಯಕ್ಕೆ ಸಂಬಂಧಿಸಿದ ತೊಂದರೆ, ಬಾಯಿಯ ಸ್ವಚ್ಛತೆ (ದಂತ), ಕ್ಯಾಲ್ಸಿಯಮ್ ಕೊರತೆ, ಕಬ್ಬಿಣಾಂಶದ ಕೊರತೆ, ದೈಹಿಕನ್ಯೂನತೆ, ಮಂಗನ ಬಾವು, ಕೆಮ್ಮು, ರಕ್ತಹೀನತೆ, ಹರ್ನಿಯ, ಕಡಿಮೆ ತೂಕ, ಎಡಗೈ ಎರಡು ಬೆರಳು ಮಡಿಚುವಿಕೆ, ಬಿಳಿಮಚ್ಚೆ, ಹೊಟ್ಟೆನೋವು, ತೊದಲುವಿಕೆ, ಕಿವಿನೋವು ಸಮಸ್ಯೆ, ಜ್ವರ, ನೆಗಡಿ, ಇತ್ಯಾದಿ.

ಕ್ಲಸ್ಟರ್ ವಾರು ಮಕ್ಕಳ ನ್ಯೂನತೆಯ ಸ್ವರೂಪ, ವೈದ್ಯರು ನೀಡಿರುವ ಚಿಕಿತ್ಸೆ ಮತ್ತು ವೈದ್ಯರು ನೀಡಿರುವ ಸಲಹೆಯ ಅಂಕಿ ಅಂಶದ ಪಟ್ಟಿ ಈ ಕೆಳಕಂಡಂತಿದೆ.

| ಕ್ರಮ ಸಂಖ್ಯೆ | ತಾಲ್ಲೂಕಿನ ಹೆಸರು | ಕ್ಲಸ್ಟರ್ ಹೆಸರು | ಸಮಸ್ಯೆಗೆ ಒಳಪಟ್ಟ ಮಕ್ಕಳ ಸಂಖ್ಯೆ | ನ್ಯೂನತೆಯ ಸ್ವರೂಪ | ವೈದ್ಯರು ನೀಡಿದ ಚಿಕಿತ್ಸೆ | ವೈದ್ಯರ ಸಲಹೆ |
|---|---|---|---|---|---|---|
| 1 | ಶಿವಮೊಗ್ಗ | ಸಿರಿಗೆರೆ<br>ನಿಧಿಗೆ<br>ಮಂಡಘಟ್ಟ<br>ಗಾಡಿಕೊಪ್ಪ | 05<br>04<br>02<br>09 | ಕಾಲಿನವಿಕಲತೆ.ಮಾತಿನ ವಿಕಲತೆ, ಅಂಗವಿಕಲತೆ, ಬುದ್ಧಿ ಮಾಂದ್ಯತೆ. ಅಂಗವಿಕಲತೆ. ದೃಷ್ಠಿ ದೋಷ ಕಲಿಕೆ ನ್ಯೂನತೆ. ಶ್ರವಣ ದೋಷ. ಕಿವಿ ಸೋರುವಿಕೆ. ಗೃಹಆಧಾರಿತ. | -<br>ಮಾತ್ರೆ<br>ಸೇವನೆ<br>-<br>- | ನಿರಂತರ ತಪಾಸಣೆ ಸೂಕ್ತಸಾಧನ ಸಲಕರಣೆಗಳ ಬಳಕೆ. ಕನ್ನಡಕ ಧರಿಸಬೇಕು. ಕಿವಿಗೆ ಶಸ್ತ್ರ ಚಿಕಿತ್ಸೆ. |

| | | | | | | |
|---|---|---|---|---|---|---|
| 2 | ಭದ್ರಾವತಿ | ಬಿ,ಆರ್,ಪಿ<br>ನಗರ-1<br>ಅಗರದಹಳ್ಳಿ<br>ಜಯಶ್ರಿವೃತ್ತ<br>ಬೊಮ್ಮನಕಟ್ಟೆ | 06<br>03<br>00<br>10<br>04 | ಬಹುವಿಕಲತೆ.ಕಾಲಿನ ವಿಕಲತೆ<br>ಬೆನ್ನು,ಕೈ ವಿಕಲತೆ. ಬುದ್ದಿ ಮಾಂದ್ಯತೆ. ಸ್ವಲ್ಪ ಪ್ರಮಾಣದ ಬುದ್ದಿ ಮಾಂದ್ಯತೆ.ದೃಷ್ಠಿ ದೋಷ | -<br>-<br>-<br>-<br>- | ಶಿಫಾರಸ್ಸು ಮಾಡಿದೆ. |
| 3 | ಹೊಸನಗರ | ನಿಟ್ಟೂರು<br>ನಗರ<br>ಅಲಗೇರಿಮಂಡ್ರಿ<br>ಮಾರುತೀಪುರ<br>ಹೊಸನಗರ<br>ಕೋಡೂರು<br>ಮೂಗುಡ್ತಿ<br>ಕಮ್ಮಚ್ಚಿ<br>ಬ್ರಹ್ಮೇಶ್ವರ | 02<br>01<br>03<br><br>02<br>05<br>06<br>01<br>01<br>02 | ಕಾಲಿನ ವಿಕಲತೆ.ಮಾತಿನ ವಿಕಲತೆ, ಅಂಗವಿಕಲತೆ, ಬುದ್ದಿ ಮಾಂದ್ಯತೆ. ಅಂಗವಿಕಲತೆ.ದೃಷ್ಠಿ ದೋಷ ಕಲಿಕಾ ನ್ಯೂನತೆ.ಶ್ರವಣ ದೋಷ. ಕಿವಿ ಸೋರುವಿಕೆ ಗೃಹ ಆಧಾರಿತ. | -<br>-<br>-<br>-<br>-<br>-<br>-<br>-<br>-<br>- | ಮನೋವಿಜ್ಞಾನಿಗೆ ಭೇಟಿ ಮಾಡಲು ಸಲಹೆ.<br>ಕ್ಯಾಂಪ್ ಗೆ ಬರಲು ಸೂಚನೆ.<br>ಜಿಲ್ಲಾ ಆಸ್ಪತ್ರೆಗೆ ಶಿಫಾರಸ್ಸು. |
| 4 | ತೀರ್ಥಹಳ್ಳಿ | ಮಂಡಗದ್ದೆ<br>ಹಿರೇಗದ್ದೆ<br>ಗುಡ್ಡೇಕೊಪ್ಪ<br>ಕೋಣಂದೂರು<br>ತೀರ್ಥಹಳ್ಳಿ<br>ಕುಡುಮಲ್ಲಿಗೆ | 01<br>00<br>03<br>03<br>00<br>07 | ಕಾಲಿನ ವಿಕಲತೆ.ಮಾತಿನ ವಿಕಲತೆ, ಅಂಗವಿಕಲತೆ, ಬುದ್ದಿ ಮಾಂದ್ಯತೆ. ಅಂಗವಿಕಲತೆ.ದೃಷ್ಠಿ ದೋಷ ಕಲಿಕಾ ನ್ಯೂನತೆ.ಶ್ರವಣ ದೋಷ. ಕಿವಿ ಸೋರುವಿಕೆ | ಇಯರ್ ಫೋನ್ ಬಳಕೆ<br>-<br>-<br>-<br>- | -<br>-<br>ನಿರಂತರ ತಪಾಸಣೆ<br>-<br>ಆಸ್ಪತ್ರೆಗೆ ಶಿಫಾರಸ್ಸು.<br>- |
| 5 | ಸಾಗರ | ತಾಳಗೊಪ್ಪ<br>ಬೆಳಲಮಕ್ಕಿ<br>ಸೈದೂರು | 01<br>11<br>00 | ಮಾನಸಿಕ ಅಸ್ವಥತೆ. ಬುದ್ದಿ ಮಾಂದ್ಯತೆ. ಅಂಗವಿಕಲತೆ. ಮಾತಿನ ವಿಕಲತೆ, ಆಟಿಸಮ್, | -<br>-<br>-<br>- | ನಿರಂತರ ತಪಾಸಣೆ<br>-<br>ಆಸ್ಪತ್ರೆಗೆ ಶಿಫಾರಸ್ಸು. |
| 6 | ಸೊರಬ | ಪಿ,ಡಬ್ಲ್ಯೂ,ಡಿ ಕಾಲೊನಿ<br>ಹೊಸಬಾಳೆ<br>ಬೆನ್ನೂರು | 08<br><br>02<br>04 | ಕಾಲಿನ ವಿಕಲತೆ.ಮಾತಿನ ವಿಕಲತೆ, ಅಂಗವಿಕಲತೆ, ಬುದ್ದಿ ಮಾಂದ್ಯತೆ. ದೃಷ್ಠಿ ದೋಷ ಕಲಿಕೆ ನ್ಯೂನತೆ. ಶ್ರವಣ ದೋಷ. | -<br>-<br>-<br>-<br>- | ನಿರಂತರ ತಪಾಸಣೆ<br>-<br>ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ತಪಾಸಣೆಗೆ ಕಳಿಹಿಸಿರುತ್ತಾರೆ |
| 7 | ಶಿಕಾರಿಪುರ | ಬೇಗೂರು<br>ಅಂಬಾರಗೊಪ್ಪ<br>ಕಪ್ಪನಹಳ್ಳಿ<br>ತೊಗರ್ಸಿ<br>ಬಿಳಕಿ<br>ನೆಲವಾಗಿಲು | 00<br>12<br>02<br>00<br>00<br>01 | ಬುದ್ದಿ ಮಾಂದ್ಯತೆ. ಬಹು ವಿಕಲತೆ. ಅಂಗವಿಕಲತೆ, ದೃಷ್ಠಿ ದೋಷ . ಕಲಿಕಾ ನ್ಯೂನತೆ. ಶ್ರವಣ ದೋಷ. | -<br>-<br>-<br>-<br>- | ಆಸ್ಪತ್ರೆಗೆ ಶಿಫಾರಸ್ಸು |


4) ಅಲ್ಲದೆ ಶಾಲೆಗಳಲ್ಲಿ ಆರೋಗ್ಯ ತಪಾಸಣೆಗೆ ಒಳಪಡುವ ವಿಶೇಷ ಅಗತ್ಯತೆಯುಳ್ಳ ವಿದ್ಯಾರ್ಥಿಗಳು ಮತ್ತು ಕಂಡಂತಹ ಸಮಸ್ಯೆಗಳು ಹೀಗಿವೆ. ದೈಹಿಕ ಅಂಗವಿಕಲತೆ, ಕಲಿಕಾ ದೋಷ, ಶ್ರವಣ ದೋಷ, ಬುದ್ಧಿಮಾಂದ್ಯತೆ, ಮಾತಿನ ವಿಕಲತೆ, ದೃಷ್ಟಿ ದೋಷ, ಬಹುವಿಕಲತೆ, ಮೂಕ ದೋಷ, ಆಟಿಸಂ, ತೊದಲುವಿಕೆ ಇತ್ಯಾದಿ .

ಈ ವಿಶ್ಲೇಷಣೆ ಇನ್ನಷ್ಟು ಸೂಕ್ಷ್ಮವಾಗಿ ವಿಶ್ಲೇಶಿಸುವುದಾದರೆ ಒಟ್ಟು 70 ಶಾಲೆಗಳ ಅಂಕಿ ಅಂಶವನ್ನಾಧರಿಸಿ

- ಬುದ್ಧಿ ಮಾಂದ್ಯತೆಯುಳ್ಳ ಮಕ್ಕಳ ಸಂಖ್ಯೆ 35
- ದೃಷ್ಠಿ ದೋಷವುಳ್ಳ ಮಕ್ಕಳ ಸಂಖ್ಯೆ 21
- ಬಹುವಿಕಲತೆಯುಳ್ಳ ಮಕ್ಕಳ ಸಂಖ್ಯೆ 15
- ದೈಹಿಕ ಅಂಗವಿಕಲತೆಯ ಮಕ್ಕಳ ಸಂಖ್ಯೆ 17
- ಇನ್ನಿತರೆ ಖಾಯಿಲೆಗಳು ಅಂದರೆ ಮಾತಿನ ವಿಕಲತೆ, ಉಗ್ಗುವಿಕೆ, ಆಟಿಸಂ, ತೊದಲುವಿಕೆ, ಇತ್ಯಾದಿ .ಸಂಖ್ಯೆ--20

ವಿವಿಧ ನ್ಯೂನತೆಗಳ ಅಂಕಿ ಅಂಶದ ಪಟ್ಟಿ ಹೀಗಿದೆ.

| ಕ್ರಮ ಸಂಖ್ಯೆ | ತಾಲ್ಲೂಕು | **ನ್ಯೂನತಗಳು** | | | | |
|---|---|---|---|---|---|---|
| | | ಬುದ್ಧಿಮಾಂದ್ಯ | ದೃಷ್ಠಿದೋಷ | ಬಹುವಿಕಲತೆ | ದೈಹಿಕ ಅಂಗವಿಕಲತೆ | ಇನ್ನಿತರೆ |
| 01 | | 05 | 01 | 05 | 04 | 03 |
| 02 | ಭದ್ರಾವತಿ | 10 | 02 | 05 | 05 | 04 |
| 03 | ಹೊಸನಗರ | 06 | 04 | 03 | 03 | 07 |
| 04 | ತೀರ್ಥಹಳ್ಳಿ | 04 | 04 | 01 | - | 07 |
| 05 | ಸಾಗರ | 04 | - | 01 | 03 | 05 |
| 06 | ಸೊರಬ | 03 | 05 | - | 02 | 01 |
| 07 | ಶಿಕಾರಿಪುರ | 06 | 02 | 02 | 04 | 01 |




ಮೇಲೆ ತಿಳಿಸಿದ ಸ್ತಂಭ ಲೇಖದಿಂದ ತಿಳಿಯಪಡಿಸುವುದೇನೆಂದರೆ ಅತೀ ಹೆಚ್ಚು ಪ್ರಮಾಣದಲ್ಲಿ ನ್ಯೂನತೆಯುಳ್ಳ ಮಕ್ಕಳಿರುವ ತಾಲ್ಲೂಕುಗಳೆಂದರೆ ಭದ್ರಾವತಿ 26 ಮಕ್ಕಳು, ಹೊಸನಗರ 23 ಮಕ್ಕಳು, ಶಿವಮೊಗ್ಗ 19 ಮಕ್ಕಳು.

ಬಹುವಿಕಲತೆಯುಳ್ಳ ಮಕ್ಕಳನ್ನು ಪರೀಕ್ಷಿಸಿ ದೃಢಿಕರಣದ ಪತ್ರವನ್ನಾಧರಿಸಿ ಈ ಮಕ್ಕಳ ಹೋಮ್ ಬೇಸ್(ಗೃಹ ಆಧಾರಿತ) ಶಿಕ್ಷಣ ಮಾಸಿಕ ರೂ 1200/- ಮೇರೆಗೆ ನಡೆಯುತ್ತಿದೆ, ಇನ್ನು ದೃಷ್ಟಿ ದೋಷ, ಶ್ರವಣ ದೋಷ ಮತ್ತು ಮಾತಿನ ವಿಕಲತೆಗೆ ಸಂಬಂಧಿಸಿದ ಮಕ್ಕಳು ಸೂಕ್ತ ಸಲಹೆ ಮತ್ತು ಮಾರ್ಗದರ್ಶನ ಪಡೆದು ಬೇರೆ ಬೇರೆ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

5) ವೈದ್ಯರು ಆರೋಗ್ಯ ತಪಾಸಣೆ ಮಾಡುವ ಸಂದರ್ಭದಲ್ಲಿ ಕೆಲವು ಖಾಯಿಲೆಗಳನ್ನು ಗುರುತಿಸಿರುತ್ತಾರೆ ,ಅವು ಕಾಲಿನ ದೌರ್ಬಲ್ಯ, ಬುದ್ಧಿಮಾಂದ್ಯತೆ, ಕಣ್ಣಿನ ತೊಂದರೆ, ಚರ್ಮರೋಗ, ಹೃದಯ ಬಡಿತ (ನಿಧಾನಗತಿ), ದಂತ ಸಮಸ್ಯೆಗಳು, ನಾಲಿಗೆ ಹಿಡಿತ, ಕಿವಿ ಸೋರುವಿಕೆ, ರಕ್ತಹೀನತೆ, ಕಣ್ಣಿನ ದೋಷ, ಹರ್ನಿಯಾ, ಸೆರೆಬ್ರಿಯಲ್ ಪಲ್ಸ್, ಶ್ರವಣ ಮತ್ತು ಮಾತಿನ ನ್ಯೂನತೆ, ವಿಟಮಿನ್ 'ಎ' ಕೊರತೆ, ಅಲರ್ಜಿ, ದೈಹಿಕ ಅಸ್ವಸ್ಥತೆ, ಮೈಕ್ರೋ ನ್ಯಾನೋಟಿಕಲ್ ಡೈಕ್ಯಾನ್ಸಿ , ಎದೆನೋವು, ಇತ್ಯಾದಿ ಗಳಿಗೆ ಸಂಬಂಧಿಸಿದ ತಜ್ಞರಾದ ಇ ಎನ್ ಟಿ, ಹೃದಯ, ಚರ್ಮ, ಚಿಕಿತ್ಸೆಗಾಗಿ ಶಿಫಾರಸ್ಸು ಮಾಡಿರುವುದು ಕಂಡುಬಂದಿದೆ.

ಹಾಗೆಯೆ ಅಲರ್ಜಿ, ವಿಟಮಿನ್ 'ಎ' ಕೊರತೆ, ದೈಹಿಕ ಅಸ್ವಸ್ಥತೆ, ರಕ್ತಹೀನತೆಯ ಸಮಸ್ಯೆಗಳಿಗೆ ಚಿಕಿತ್ಸೆ ನೀಡಿರುತ್ತಾರೆ. ಅಲ್ಲದೆ ಮನೆ ಮದ್ದು ಸಹ ನೀಡಿರುವುದು ಕಂಡುಬಂದಿದೆ **ಉದಾಹರಣೆಗೆ** ಜೀರಿಗೆ, ಹಾಲು, ನೀರು, ಬೆಲ್ಲ ಕುದಿಸಿ ಸೇವಿಸುವಿಕೆ.

6) ಶಾಲೆಗಳಲ್ಲಿ ಆರೋಗ್ಯ ತಪಾಸಣೆಯನ್ನು ಕೈಗೊಳ್ಳಲು "ಸುವರ್ಣ ಆರೋಗ್ಯ ಚೈತನ್ಯ" ಅಡಿಯಲ್ಲಿ ಆಗಸ್ಟ್ ತಿಂಗಳಲ್ಲಿ ಸೂಚಿಸಲಾಗಿದೆ, ಮತ್ತು ನನ್ನ ಪ್ರತಿದರ್ಶಿಯಾದ 70 ಶಾಲೆಗಳಲ್ಲಿ ಆಗಿರುವ ಪ್ರಗತಿ ಈ ಕೆಳಕಂಡಂತಿದೆ

ಕನಿಷ್ಟ 1ಬಾರಿ ,ಗರಿಷ್ಟ 4 ಬಾರಿ ಆರೊಗ್ಯ ತಪಾಸಣೆ ನಡೆಸಿರುವ ವಿವರ ಹೀಗಿದೆ.

## ಇದರ ವಿಶ್ಲೇಷಣೆ ಹೀಗಿದೆ

| ಒಂದು ಬಾರಿ ವೈದ್ಯರು ಭೇಟಿ ಮತ್ತು ತಪಾಸಣೆ ಮಾಡಿರುವ ಶಾಲೆಗಳ ಸಂಖ್ಯೆ | ಎರಡು ಬಾರಿ ವೈದ್ಯರು ಭೇಟಿ ಮತ್ತು ತಪಾಸಣೆ ಮಾಡಿರುವ ಶಾಲೆಗಳ ಸಂಖ್ಯೆ | ಮೂರರಿಂದ ನಾಲ್ಕು ಬಾರಿ ವೈದ್ಯರು ಭೇಟಿ ನೀಡಿ ತಪಾಸಣೆ ಮಾಡಿರುವ ಶಾಲೆಗಳ ಸಂಖ್ಯೆ | ಒಮ್ಮೆಯು ವೈದ್ಯರು ಭೇಟಿ ನೀಡದಿರುವ ಮತ್ತು ತಪಾಸಣೆ ಮಾಡದಿರುವ ಶಾಲೆಗಳ ಸಂಖ್ಯೆ |
|---|---|---|---|
| 64 | 2 | 2 | 2 |

- ❖ **ಎರಡು ಬಾರಿ ಆರೋಗ್ಯತಪಾಸಣೆ ನಡೆದಂತಹ ಶಾಲೆಗಳ ಹೆಸರು** –ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಕುರುಬಳ್ಳಿ ಮತ್ತು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಜಯಶ್ರಿ ವೃತ್ತ ಭದ್ರಾವತಿ ತಾಲ್ಲೂಕು.
- ❖ **ಮೂರರಿಂದ ನಾಲ್ಕು ಬಾರಿ ಆರೋಗ್ಯತಪಾಸಣೆ ನಡೆದಂತಹ** ಶಾಲೆಗಳ ಹೆಸರು –ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಅಲಗೇರಿಮಂಡ್ರಿ ಹೊಸನಗರ ತಾಲ್ಲೂಕು ಮತ್ತು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹೊಸಬಾಳೆ ಶಿಕಾರಿಪುರ ತಾಲ್ಲೂಕು.
- ❖ **ಒಮ್ಮೆಯು ಆರೋಗ್ಯತಪಾಸಣೆ ನಡೆಯದಿರುವ ಶಾಲೆಗಳ ಹೆಸರು** – ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ದ್ಯಾವಿನಕೆರೆ ಮತ್ತು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಗುತ್ಯಪ್ಪ ಕಾಲೋನಿ, ಶಿವಮೊಗ್ಗ ತಾಲ್ಲೂಕು (ಇದಕ್ಕೆ ಕಾರಣವೇನೆಂದರೆ ವೈದ್ಯರು ಜೂನ್ ತಿಂಗಳಿನಲ್ಲಿ ಭೇಟಿ ನೀಡಿದರು, ಆದರೆ ಅದು ಮಕ್ಕಳ ದಾಖಲಾತಿ ತಿಂಗಳಿರುವ ಪ್ರಯುಕ್ತ ಆಗಸ್ಟ್ ನಲ್ಲಿ ಬರಹೇಳಿದರು ಆದರೆ ವೈದ್ಯರು ಆಗಸ್ಟ್ ತಿಂಗಳಿನಲ್ಲಿ ಬಂದಿರುವುದಿಲ್ಲ).

7) ತಪಾಸಣಾ ಸಂದರ್ಭದಲ್ಲಿ ವೈದ್ಯರು ವಿವಿಧೆಡೆ ಹಲವು ಸಲಹೆ ಸೂಚನೆಗಳನ್ನು ನೀಡಿರುತ್ತಾರೆ. ಅವು ದೈನಂದಿನ ಸ್ವಚ್ಛತೆಗೆ ಸಂಬಂಧಿಸಿದೆ. ಸ್ವಚ್ಛತೆ, ಆರೋಗ್ಯ, ಗುಪ್ತರೋಗಗಳ ಬಗ್ಗೆ ಅರಿವು, ನೀರಿನ ಸ್ವಚ್ಛತೆ, ಸಾಮಾಜಿಕ ಸ್ವಚ್ಛತೆ, ಸಮತೋಲನ ಆಹಾರ ಸೇವನೆ, ಪೋಷಕರ ಸಾಮಾಜಿಕ ನಡವಳಿಕೆ, ಕುಡಿಯುವ ನೀರನ್ನು ಬಿಸಿಮಾಡಿ ಕುಡಿಯುವುದು, ಪರಿಸರ ಶುಚಿತ್ವ, ಬಿಸಿಯೂಟದ ಬಗ್ಗೆ ವಿಶೇಷ ಕಾಳಜಿ ವಹಿಸುವಿಕೆ, ಶೌಚಾಲಯ ಸ್ವಚ್ಛವಾಗಿಟ್ಟುಕೊಳ್ಳುವುದ, ದಿನಾ ಸ್ನಾನ ಮಾಡುವುದು, ಉಗುರು ಕಟ್ ಮಾಡುವುದು, ಎರಡು ಬಾರಿ ಹಲ್ಲುಜ್ಜುವುದು, ಮಕ್ಕಳಿಗೆ ಡಿ,ಪಿ,ಟಿ, ಮತ್ತು ಟಿ ಟಿ ಲಸಿಕೆ ಕೊಡಿಸುವುದು, ಹಾಲು, ಸೊಪ್ಪು, ಬೇಳೆ, ಕಾಳುಗಳ ಸೇವನೆ, ಅಡುಗೆ ಕೋಣೆಯ ಶುಚಿತ್ವ, ಆಯೋಡಿನ್ ಯುಕ್ತ ಉಪ್ಪಿನ ಬಳಕೆ, ಖಾಯಿಲೆ ಪ್ರಾರಂಭದಲ್ಲಿ ಆಸ್ಪತ್ರೆಗೆ ಹೋಗುವುದು, ಕಬ್ಬಿಣಾಂಶದ ಮಾತ್ರೆಗಳ ಸೇವನೆ , ಮಕ್ಕಳು ಚೆನ್ನಾಗಿ ನೀರು ಕುಡಿಯಬೇಕು, ಡೆಂಗ್ಯೂ, ಮಲೇರಿಯಾ ಮತ್ತು ಚಿಕನ್ ಗುನ್ಯ ರೋಗಗಳ ಬಗ್ಗೆ ಮುನ್ನೆಚ್ಚರಿಕೆ ವಹಿಸುವುದು .

8) ಮಕ್ಕಳ ಆರೋಗ್ಯ ಉತ್ತಮ ಪಡಿಸುವ ನಿಟ್ಟಿನಲ್ಲಿ ಸರ್ಕಾರದ ಯೋಜನೆಯಂತೆ ಮಾತ್ರೆಗಳ ಸರಬರಾಜು ಎಲ್ಲಾ ಶಾಲೆಗಳಿಗೆ ಮಾಡುತಿದ್ದು, ಇದರ ನಿರ್ವಹಣೆಯು ಉತ್ತಮವಾಗಿ ಬಳಕೆಯಲ್ಲಿದೆ ಮಾತ್ರೆಗಳ ವಿವರ ಈ ಕೆಳಕಂಡಂತಿದೆ.

1 ರಿಂದ 7 ನೇ ತರಗತಿಯ ಸರ್ಕಾರಿ ಹಾಗು ಅನುದಾನಿತ ಶಾಲಾ ಮಕ್ಕಳಿಗೆ ಮಧ್ಯಾನ್ಹದ ಬಿಸಿಯೂಟದೊಂದಿಗೆ ಈ ಕೆಳಕಂಡ ಪೌಷ್ಟಿಕಾಂಶ ಮಾತ್ರೆಗಳನ್ನು ಸರಬರಾಜು ಮಾಡಿರುತ್ತಾರೆ

| ಮಾತ್ರೆಗಳು | | ಪ್ರಮಾಣ |
|---|---|---|
| ವಿಟಮಿನ್ ,ಎ | 2ಲಕ್ಷ ಐ ಯು | ವರ್ಷಕ್ಕೆ 2 ಮಾತ್ರೆಗಳು |
| ಕಬ್ಬಿಣಾಂಶ ಮಾತ್ರೆ | 20 ಎಮ್ ಜಿ | ವಾರಕ್ಕೆ 3 ರಂತೆ 36 ವಾರಗಳಿಗೆ 108 ಮಾತ್ರೆಗಳು |
| ಆಲ್ಬೆಂಡಜೋಲ್ (ಜಂತುಹುಳ ನಿವಾರಕ ಮಾತ್ರೆ) | 400 ಎಮ್ ಜಿ | ವರ್ಷಕ್ಕೆ 2 ಮಾತ್ರೆಗಳು |

9) ಆರೋಗ್ಯ ತಪಾಸಣಾ ಕಾರ್ಯಕ್ರಮದಿಂದ ಮಕ್ಕಳ ಕಲಿಕೆಯ ಮೇಲೆ ಉತ್ತಮ ಪರಿಣಾಮ ಬೀರುತ್ತಿದೆ ಮುಖ್ಯ ಶಿಕ್ಷಕರ ಹಾಗು ಶಿಕ್ಷಕರ ಅಭಿಪ್ರಾಯ ಈ ಕೆಳಕಂಡಂತ್ತಿದೆ,

- ಮಕ್ಕಳು ತೊಂದರೆಗಳಿಂದ ಹೊರಬರುತ್ತಿದ್ದಾರೆ.
- ತಿಂದ ಆಹಾರ ಸಮರ್ಪಕವಾಗಿ ಕರಗಿಸಲು, ರಕ್ತವಾಗಿ ಪರಿವರ್ತಿಸಲು ಹಾಗು ಮಕ್ಕಳು ಚೈತನ್ಯದಿಂದ ಕಲಿಕೆಯಲ್ಲಿ ತೊಡಗಲು ಸಹಕಾರಿಯಾಗಿದೆ .
- ಮಕ್ಕಳ ಆರೋಗ್ಯ ಸುಧಾರಣೆಯಾಗುತ್ತಿದೆ, ಹಲ್ಲುನೋವು , ಕಿವಿಸೋರುವಿಕೆ ,ಹೃದಯ ಕಾಯಿಲೆ , ಹೊಟ್ಟೆನೋವು , ಸ್ವಚ್ಚತೆ ಇತ್ಯಾದಿಗಳ ಮೇಲೆ ಪ್ರಭಾವ ಬೀರುತ್ತಿದೆ.
- ಗೈರುಹಾಜರಿ ಕಡಿಮೆಯಾಗಿದೆ.
- ಆಹಾರವನ್ನು ಚೆನ್ನಾಗಿ ಸೇವನೆ ಮಾಡುತ್ತಿದ್ದಾರೆ.
- ಎಲ್ಲಾ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದಾರೆ ಮತ್ತು ಲವಲವಿಕೆಯಿಂದ ಕಲಿಯುತ್ತಿದ್ದಾರೆ.
- ಮಕ್ಕಳು ಶುಚಿತ್ವ ಕಾಪಾಡುತ್ತಿರುವುದರಿಂದ ಹಲ್ಲುನೋವು ನಿವಾರಣೆಯಾಗಿದೆ.
- ಮಕ್ಕಳು ಎರಡು ಬಾರಿ ಹಲ್ಲುಜ್ಜುವುದು ಕಲಿತಿದ್ದಾರೆ, ಹಾಗು ಊಟದ ಮೊದಲು ಸೋಪಿನಿಂದ ಕೈ ತೊಳೆದುಕೊಂಡು ಶುಭ್ರರಾಗುತ್ತಿದ್ದಾರೆ.
- ಆರೋಗ್ಯ ತಪಾಸಣೆಯಿಂದ ಮಕ್ಕಳಲ್ಲಿನ ಆರೋಗ್ಯ ಸಮಸ್ಯೆಗಳನ್ನು ಪ್ರಾರಂಭಿಕ ಹಂತದಲ್ಲಿಯೇ ಪತ್ತೆಮಾಡಿ ಚಿಕಿತ್ಸೆ ನೀಡಲು ಸಹಕಾರಿಯಾಗಿದೆ.
- ಅಪೌಷ್ಟಿಕತೆಯನ್ನು ಕಂಡುಹಿಡಿದು ಪೌಷ್ಟಿಕ ಔಷಧದ ಸೇವನೆಯಿಂದ ಮಕ್ಕಳ ಕಲಿಕೆಯ ಮೇಲೆ ಉತ್ತಮ ಪರಿಣಾಮ ಬೀರುತ್ತಿದೆ.
- ಪೋಷಕರು ಸಹ ಮಕ್ಕಳ ಶುಚಿತ್ವದತ್ತ ಗಮನ ಹರಿಸುತ್ತಿದ್ದಾರೆ.

10) ಮಕ್ಕಳ ಆರೋಗ್ಯ ಹಿತದೃಷ್ಠಿಯಿಂದ ಶಾಲೆಯಲ್ಲಿಯೇ ಲಸಿಕೆಗಳನ್ನು ನೀಡಲಾಗುತ್ತಿದೆ, ಈ ನಿಟ್ಟಿನಲ್ಲಿ ಬಹಳಷ್ಟು ಶಾಲೆಗಳಲ್ಲಿ ಲಸಿಕೆ ನೀಡದೇ ಇರುವುದನ್ನು ನಾವು ನೋಡುತ್ತೇವೆ, **ಉದಾಹರಣೆಗೆ** ಶಿವಮೊಗ್ಗದ ಮಂಡಘಟ್ಟ ಕ್ಲಸ್ಟರಿನ ಸ,ಕಿ,ಪ್ರಾ,ಶಾಲೆ ಕರಂಬಳ್ಳಿಯಲ್ಲಿ ಒಂದರಿಂದ ಐದನೇ ತರಗತಿಯ 15 ಮಕ್ಕಳಲ್ಲಿ 14 ಮಕ್ಕಳಿಗೆ ಟಿ,ಟಿ, ಲಸಿಕೆ ನೀಡಿರುತ್ತಾರೆ ಮತ್ತು ಸಿರಿಗೆರೆ ಕ್ಲಸ್ಟರ್ ಶಾಲೆಗಳಲ್ಲಿ ಲಸಿಕೆ ನೀಡಲಾಗಿದೆ, ತಾಲ್ಲೂಕಿನ ಪ್ರತಿದರ್ಶಿಯ ಐದು ಶಾಲೆಯಲ್ಲಿ ಲಸಿಕೆ ನೀಡಿರುವುದಿಲ್ಲ ಎಂಬುದು ತಿಳಿದು ಬಂದಿದೆ


ಹಾಗೆಯೇ ಭದ್ರಾವತಿ ತಾಲ್ಲೂಕಿನ ಒಟ್ಟು 10 ಪ್ರತಿದರ್ಶಿ ಶಾಲೆಗಳಲ್ಲಿನ 06 ಶಾಲೆಗಳಲ್ಲಿ ಡಿ,ಪಿ,ಟಿ ಮತ್ತು ಟಿ,ಟಿ, ಲಸಿಕೆ ನೀಡಲಾಗಿದೆ.

ಹೀಗೆ ತೀರ್ಥಹಳ್ಳಿಯ 06 ಶಾಲೆಗಳಲ್ಲಿ, ಡಿ, ಪಿ, ಟಿ ಮತ್ತು ಟಿ,ಟಿ, ಲಸಿಕೆ ನೀಡಲಾಗಿದೆ, ಜೊತೆ ಜೊತೆಗೆ ಈ ತಾಲ್ಲೂಕಿನ ಸ,ಹಿ,ಪ್ರಾ,ಶಾ, ನೆಲ್ಲಿಸರ ಕ್ಯಾಂಪ್ ಮತ್ತು ಹಳಗ ಶಾಲೆಗಳಲ್ಲಿ ಮಂಗನಕಾಯಿಲೆ ಲಸಿಕೆ ನೀಡಲಾಗಿದೆ .

ಇನ್ನುಳಿದ ಹೊಸನಗರ ತಾಲ್ಲೂಕಿನ 04 ಶಾಲೆಗಳಲ್ಲಿ ಡಿ,ಪಿ,ಟಿ ಮತ್ತು ಟಿ,ಟಿ, ಲಸಿಕೆ ನೀಡಲಾಗಿದೆ , ಸಾಗರ ತಾಲ್ಲೂಕಿನ 06 ಶಾಲೆಗಳಲ್ಲಿ , ಸೊರಬ ತಾಲ್ಲೂಕಿನ 05 ಶಾಲೆಗಳಲ್ಲಿ ಮತ್ತು ಶಿಕಾರಿಪುರದ 05 ಶಾಲೆಗಳಲ್ಲಿ ಡಿ,ಪಿ,ಟಿ ಮತ್ತು ಟಿ,ಟಿ, ಲಸಿಕೆ ನೀಡಲಾಗಿದೆ

ಲಸಿಕೆ ನೀಡಿರುವ ತಾಲ್ಲೂಕುವಾರು ಅಂಕಿಅಂಶಗಳ ಪಟ್ಟಿ .

| ಕ್ರಮ ಸಂಖ್ಯೆ | ತಾಲ್ಲೂಕು | ಪ್ರತಿದರ್ಶಿ ಶಾಲೆಗಳ ಸಂಖ್ಯೆ | ಡಿ,ಪಿ,ಟಿ ಮತ್ತು ಟಿ,ಟಿ ಲಸಿಕೆ ನೀಡಿರುವ ಶಾಲೆಗಳ ಸಂಖ್ಯೆ | ಡಿ,ಪಿ,ಟಿ ಮತ್ತು ಟಿ,ಟಿ ಲಸಿಕೆ ನೀಡದೇ ಇರುವ ಶಾಲೆಗಳ ಸಂಖ್ಯೆ |
|---|---|---|---|---|
| 1 | ಶಿವಮೊಗ್ಗ | 10 | 05 | 05 |
| 2 | ಭದ್ರಾವತಿ | 10 | 06 | 04 |
| 3 | ಹೊಸನಗರ | 10 | 04 | 06 |
| 4 | ತೀರ್ಥಹಳ್ಳಿ | 10 | 06 | 04 |
| 5 | ಸಾಗರ | 10 | 06 | 04 |
| 6 | ಸೊರಬ | 10 | 05 | 05 |
| 7 | ಶಿಕಾರಿಪುರ | 10 | 05 | 05 |




ಈ ಸ್ತಂಭ ಲೇಖದ ಮೂಲಕ ನಾವು ತಿಳಿಯಬಹುದು ತಪಾಸಣಾ ಸಂದರ್ಭದಲ್ಲಿ ಲಸಿಕೆ ನಿಡಿರುವ ಶಾಲೆಗಳ ಸಂಖ್ಯೆ 37 ಹಾಗು ಶೇಕಡವಾರು ನೋಡಿದರೆ **52.85 %** ಆಗಿರುತ್ತದೆ ಹಾಗು ಲಸಿಕೆ ನೀಡದೇ ಇರುವ ಶಾಲೆಗಳ ಸಂಖ್ಯೆ 33 ಮತ್ತು ಶೇಖಡವಾರು ನೋಡಿದರೆ **47.14** ಆಗಿರುತ್ತದೆ.

11) ಮಕ್ಕಳ ಆರೋಗ್ಯ ತಪಾಸಣೆ ಕುರಿತು ಮುಖ್ಯ ಶಿಕ್ಷಕರ ಸಂಕ್ಷಿಪ್ತ ಅಭಿಪ್ರಾಯ ಕೇಳಿದಾಗ, ಈ ಕಾರ್ಯಕ್ರಮ ತುಂಬಾ ಉಪಯುಕ್ತವಾದುದು ಇದರಿಂದಾಗಿ ಮಕ್ಕಳಲ್ಲಿರುವ ನ್ಯೂನತೆಯನ್ನು ಗುರುತಿಸಿ ನಿವಾರಣೆ ಮಾಡಲು ಅವಕಾಶವಾಗುತ್ತಿದೆ, ಕಲಿಕೆಯಲ್ಲಿ ಮಕ್ಕಳು ಉತ್ಸಾಹದಿಂದ ಪಾಲ್ಗೊಳ್ಳಲು ಅವಕಾಶವಾಗುತ್ತಿದೆ , ಬೌದ್ದಿಕ, ದೈಹಿಕ, ಅಭಿವೃದ್ದಿ ಹೊಂದುತ್ತಿದ್ದಾರೆ, ಅಷ್ಟೇ ಅಲ್ಲ ನಮ್ಮ ಶಾಲೆಗಳಿಗೆ ಕಲಿಯಲು ಕಳುಹಿಸುತ್ತಿರುವ ಪೋಷಕರು ಬಡತನದಲ್ಲಿರುವುದರಿಂದ ಅವರ ಮಕ್ಕಳ ದೈಹಿಕ /ಮಾನಸಿಕ ನ್ಯೂನತೆಯನ್ನು ಕಂಡು ಹಿಡಿಯುವಲ್ಲಿ ಆಸಕ್ತಿ ಕಡಿಮೆ ಹಾಗು ವೆಚ್ಚ ಭರಿಸಲು ಸಾಧ್ಯವಿಲ್ಲ, ಆದರೆ ಶಾಲೆಗಳಲ್ಲಿ ಈ ಕಾರ್ಯಕ್ರಮ ನಡೆಯುವುದರಿಂದ ಅವರ ಸಮಸ್ಯೆಗೆ ಪರಿಹಾರ ದೊರಕಿದ ಹಾಗಾಯಿತು, ಅಲ್ಲದೆ ಈಗ ಪೋಷಕರು ಸಹ ಶುಚಿತ್ವ, ಶಿಸ್ತಿನತ್ತ ಗಮನ ಹರಿಸುತಿದ್ದಾರೆ .

12) ನೀರು ಮಾನವನ ಜೀವನಕ್ಕೆ ಅತೀ ಮುಖ್ಯವಾದ ಅಂಶ, ನೀರಿಲ್ಲದೆ ಬದುಕಲಾರ, ಹಾಗೆಯೇ ಕೊಳಕು ನೀರಿನಿಂದ ಹಲವಾರು ಖಾಯಿಲೆಗಳು ಬರುವ ಸಾಧ್ಯತೆಯೂ ಇದೆ, ಆದ್ದರಿಂದ ಸರ್ಕಾರದ ಯೋಜನೆಗಳಲ್ಲಿ, ಶಾಲೆಗಳಿಗೆ ನೀರಿನ ಸರಬರಾಜು ಒಂದು ಅತೀ ಮಹತ್ವವಾದುದು. ಈ ನಿಟ್ಟಿನಲ್ಲಿ ಶಾಲೆಗಳಲ್ಲಿ ಕುಡಿಯುವ ನೀರಿನ

ವ್ಯವಸ್ಥೆ ಸಮರ್ಪಕವಾಗಿದೆ, ವಿವಿಧ ಮೂಲಗಳಾದ ನಲ್ಲಿ ಮತ್ತು ಬಾವಿ ಗಳಿಂದ ದೊರೆಯುತ್ತಿದೆ, ಶುದ್ದೀಕರಿಸಲು ಶೇಖಡ 90% ಶಾಲೆಗಳಲ್ಲಿ ಆಕ್ವಾ ಗಾರ್ಡ್ ಬಳಸುತಿದ್ದಾರೆ ಇನ್ನುಳಿದ 10% ಶಾಲೆಗಳಲ್ಲಿ ಫಿಲ್ಟರ್ ವ್ಯವಸ್ಥೆ ಮಾಡಿಕೊಂಡಿದ್ದಾರೆ.

13) ಶುಚಿತ್ವವು ಕೇವಲ ಆರೋಗ್ಯ ತಪಾಸಣೆಯಿಂದ ಸಾಲದು, ಇದನ್ನು ಸಂರಕ್ಷಿಸಲು ಶಾಲೆಗಳಲ್ಲಿ ಪರಿಸರವು ಶುಚಿಯಾಗಿಡಬೇಕು. ಇದನ್ನು ವಿಚಾರಿಸಿದಾಗ , ಮುಖ್ಯ ಶಿಕ್ಷಕರು ಹಾಗು ಸಹ ಶಿಕ್ಷಕರ ಅಭಿಪ್ರಾಯದಂತೆ ಅವರು ಅತಿಯಾದ ಕಾಳಜಿ ವಹಿಸುತ್ತಿದ್ದಾರೆ, ಮಕ್ಕಳು ಮೂತ್ರ ವಿಸರ್ಜನೆ ಮಾಡಲು ಕಡ್ಡಾಯವಾಗಿ ಶೌಚಾಲಯ ಬಳಸಲು, ತದನಂತರ ಸೋಪು ಬಳಸಿ ನೀರಿನಿಂದ ಕೈ ತೊಳೆಯಲು ಆಗಾಗ ಮಾರ್ಗದರ್ಶನ ಮಾಡುತ್ತಿದ್ದಾರೆ. ಶಾಲೆಗಳಲ್ಲಿ ಕುಡಿಯುವ ನೀರಿನ ಬಳಕೆ, ಶೌಚಾಲಯ ಸ್ವಚ್ಚತೆ ಬಗ್ಗೆ ಕಾಳಜಿ ವಹಿಸುತ್ತಿದ್ದಾರೆ, ಅಲ್ಲದೆ ಭದ್ರಾವತಿ ತಾಲ್ಲೂಕಿನ ಕಲ್ಯಾಣ ಹಿರಿಯ ಪ್ರಾಥಮಿಕ ಶಾಲೆ ಬೊಮ್ಮನ ಕಟ್ಟೆಯಲ್ಲಿ ಗಿಡಮರಗಳನ್ನು ನೆಡಲಾಗಿದೆ, ಇದರಿಂದ ಪರಿಸರವು ಸ್ವಚ್ಚವಾಗಿರಲು ಹಾಗು ಪರಿಶುದ್ದ ಗಾಳಿ ಬೆಳಕು ನೀಡಲು ಸಹಕಾರಿಯಾಗಿದೆ ,

ಇದೇ ನಿಟ್ಟಿನಲ್ಲಿ ಸಾಗರ ತಾಲ್ಲೂಕಿನ ಸ,ಹಿ,ಪ್ರಾ,ಶಾ ಬೆಳಲಮಕ್ಕಿಯು ನಗರ ವ್ಯಾಪ್ತಿಗೆ ಸೇರುತ್ತದೆ ,ಮುಂದೆ ಓಡಾಡುವ ವಾಹನಗಳಿಂದಾಗಿ ಧೂಳು ಒಳಕ್ಕೆ ಪ್ರವೇಶಿಸುವುದರಿಂದ ಪರಿಸರವು ನೈರ್ಮಲ್ಯ ಕಳೆದುಕೊಂಡಿದೆ ಎಂಬ ಕಾಳಜಿ ಮತ್ತು ಪರಿಸರ ಸಂರಕ್ಷಣೆಯಲ್ಲಿ ಅಸಮಧಾನ ತೋರಿರುತ್ತಾರೆ .

# ಅಧ್ಯಾಯ : 6

## ಅಧ್ಯಯನದ ಒಳನೋಟಗಳು ;

1) ಈ ಪ್ರಶ್ನಾವಳಿಯ ಮುಖಾಂತರ ಮುಖ್ಯ ಶಿಕ್ಷಕರು ಮುಕ್ತವಾಗಿ ಧನಾತ್ಮಕ ಮತ್ತು ಋಣಾತ್ಮಕ ಅಂಶಗಳನ್ನು ಅಭಿವ್ಯಕ್ತಿಸಿರುತ್ತಾರೆ.
2) ಸುವರ್ಣ ಆರೋಗ್ಯ ಚೈತನ್ಯ ಕಾರ್ಯಕ್ರಮವು ಆಗಸ್ಟ್ ತಿಂಗಳಲ್ಲಿ ನಡೆಯಬೇಕು, ಆದರೆ ಶೇ 80% ಶಾಲೆಗಳಲ್ಲಿ ಡಿಸೆಂಬರ್ ವರೆಗಿನ ಕಾಲಾವಧಿ ತೆಗೆದುಕೊಂಡಿರುತ್ತಾರೆ.
3) ಕೆಲವು ಶಾಲೆಗಳಲ್ಲಿ ಈ ಕಾರ್ಯಕ್ರಮವು 3-4 ಬಾರಿ ನಡೆದಿದೆ ಹಾಗೆಯೇ ಕೆಲವು ಶಾಲೆಗಳಲ್ಲಿ ಒಮ್ಮೆಯೂ ನಡೆದಿರುವುದಿಲ್ಲ ( ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ) .
4) ಆರೋಗ್ಯ ಇಲಾಖೆಯ ವೈದ್ಯರು ತಪಾಸಣೆಯ ಮೂಲಕ ಮಕ್ಕಳಲ್ಲಿರುವ ವಿವಿಧ ಕಾಯಿಲೆಗಳಾದ ದೃಷ್ಠಿ ದೋಷ, ಹೃದಯ ಕಾಯಿಲೆ, ಚರ್ಮಕ್ಕೆ ಸಂಬಂಧಿಸಿದ ಖಾಯಿಲೆಗಳನ್ನು ಪತ್ತೆ ಹಚ್ಚಿ ನಿವಾರಣೆಗೆ ಅನುವು ಮಾಡಿಕೊಟ್ಟಿದ್ದಾರೆ.
5) ಹಲವೆಡೆ ವೈದ್ಯರು ಕೇವಲ ತಪಾಸಣೆ ಕಾರ್ಯಕ್ಕೆ ಸೀಮಿತವಾಗದೇ, ಮಕ್ಕಳ ಶುಚಿತ್ವ , ಶಿಸ್ತಿನತ್ತ ಕಾಳಜಿ ವಹಿಸುತಿದ್ದಾರೆ .
6) ಈ ಕಾರ್ಯಕ್ರಮದಿಂದಾಗಿ ಅನಕ್ಷರಸ್ಥ ಹಾಗು ಬಡ ಪೋಷಕರ ಆರೋಗ್ಯಭಾಗ್ಯದತ್ತ ಎಚ್ಚೆತ್ತು ಕೊಂಡಿದ್ದಾರೆ ಹಾಗು ಸ್ವಚ್ಚತೆ ಕಡೆ ಗಮನ ಹರಿಸುತಿದ್ದಾರೆ.
7) ಈ ಕಾರ್ಯಕ್ರಮದಿಂದಾಗಿ ಮಕ್ಕಳ ಚೈತನ್ಯಯುತ ಕಲಿಕೆ ಹಾಗು ವಿವಿಧ ಚಟುವಟಿಕೆಗಳಲ್ಲಿ ಭಾಗವಹಿಸುವಿಕೆಗೆ ನೆರವಾಗಿದೆ.
8) ವಿವಿಧ ಮಾತ್ರೆಗಳು ಮತ್ತು ಲಸಿಕೆ ಶಾಲೆಯಲ್ಲಿ ಉಚಿತವಾಗಿ ನೀಡುವುದರಿಂದ ಬಡ ಪೋಷಕರಿಗೆ ನೆರವಾಗಿದೆ.
9) ಪರಿಸರ ಉತ್ತಮಪಡಿಸಲು ಮು,ಶಿ ಮತ್ತು ಸ,ಶಿ, ಶ್ರಮಿಸುತಿದ್ದಾರೆ, ಇನ್ನೊಂದೆಡೆ ಧೂಳು ಮತ್ತು ಮಾಲಿನ್ಯದಿಂದಾಗಿ ಶಾಲಾ ಮಕ್ಕಳ ಮೇಲೆ ಕೆಟ್ಟ ಪ್ರಬಾವ ಬೀರುತ್ತಿರುವ ಕಾಳಜಿಯೂ ಇದೆ.

# ಅಧ್ಯಾಯ : 7

## ಅಧ್ಯಯನದ ಫಲಶೃತಿ ;

ಈ ಅಧ್ಯಯನದಿಂದ ನಾನು ಕಂಡುಕೊಂಡ ಅಂಶಗಳು ಹೀಗಿವೆ...

1) ಆರೋಗ್ಯ ತಪಾಸಣಾ ಕಾರ್ಯಕ್ರಮವು ಸುವರ್ಣ ಆರೋಗ್ಯ ಚೈತನ್ಯ ಯೋಜನೆಯಡಿಯಲ್ಲಿ ಆಗಸ್ಟ್ ತಿಂಗಳಲ್ಲಿ ಹಮ್ಮಿಕೊಳ್ಳಬೇಕು ಆದರೆ ಬಹುತೇಕ ಶಾಲೆಗಳಲ್ಲಿ ಈ ಕಾರ್ಯಕ್ರಮವು ಡಿಸೆಂಬರ್ ವರೆಗೆ ಮುಂದೂಡಿರುವುದು ಕಂಡುಬರುತ್ತದೆ.
2) ಈ ಕಾರ್ಯಕ್ರಮವು ಹಲವು ಶಾಲೆಗಳಲ್ಲಿ 3-4 ಬಾರಿ ನಡೆದಿದೆ ಹಾಗು ಕೇವಲ ವೈದ್ಯರಲ್ಲದೆ ಆಗಾಗ ದಾದಿಯರು ಸಹ ಭಾಗವಹಿಸಿ ಮಾತ್ರೆಗಳನ್ನು ನೀಡಿರುತ್ತಾರೆ ಹಾಗು ತಪಾಸಣೆ ಮಾಡಿರುತ್ತಾರೆ ಇಂತಹ ಶಾಲೆಗಳು ಎರಡಿವೆ. ಅವು ಹೊಸನಗರ ತಾಲ್ಲೂಕಿನ ಅಲಗೇರಿಮಂಡ್ರಿ ಮತ್ತು ಸೊರಬ ತಾಲ್ಲೂಕಿನ ಹೊಸಬಾಳೆ.
3) ಸದರಿ ಕಾರ್ಯಕ್ರಮವು ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಸದರೀ ಶಾಲೆಗಳಲ್ಲಿ ಒಮ್ಮೆಯೂ ನಡೆದಿರುವುದಿಲ್ಲ ಇವು ಶಿವಮೊಗ್ಗ ತಾಲ್ಲೂಕಿನ ಸ,ಹಿ,ಪ್ರಾ,ಶಾ ದ್ಯಾವಿನಕೆರೆ ಮತ್ತು ಸ.ಕಿ,ಪ್ರಾ,ಶಾ,ಗುತ್ಯಪ್ಪ ಕಾಲೋನಿ.
4) ಆರೋಗ್ಯ ತಪಾಸಣೆಯ ಸಹಕಾರದಿಂದ ವಿವಿಧ ಸಮಸ್ಯೆಗಳನ್ನು ಕಂಡು ಹಿಡಿದು, ಪ್ರಾರಂಭದಲ್ಲಿಯೇ ಅಂತಹ ಸಮಸ್ಯೆ / ಖಾಯಿಲೆಗಳಿಗೆ ನಿವಾರಣೆ ಮಾಡುವಲ್ಲಿ ಸಹಕಾರಿಯಾಗಿದೆ, ಉದಾಹರಣೆಗೆ ಸಣ್ಣ ಪುಟ್ಟ ದೋಷ / ಸಮಸ್ಯೆಗಳಾದ ಕಬ್ಬಿಣಾಂಶದ ಕೊರತೆ, ಮಂಗನ ಬಾವು, ಕೆಮ್ಮು, ಜ್ವರ, ರಕ್ತಹೀನತೆ, ಕಡಿಮೆ ತೂಕ, ಬಾಯಿಯ ಸ್ವಚ್ಚತೆ, ಹೊಟ್ಟೆನೋವು ಇತ್ಯಾದಿ.

ಅಲ್ಲದೆ ಕೆಲವು ಮಕ್ಕಳಿಗೆ ಗಂಭೀರ ಖಾಯಿಲೆಗಳಾದ ಹೃದಯ ಖಾಯಿಲೆ, ಹರ್ನಿಯ, ದೃಷ್ಠಿ ದೋಷ, ಕಿವಿ ಸೋರುವಿಕೆ ಇತ್ಯಾದಿ ಇರುವುದು ಕಂಡು ಬಂದಿದ್ದು, ವೈದ್ಯರು ಇಂತಹ ಮಕ್ಕಳಿಗೆ ಸೂಕ್ಷ್ಮವಾಗಿ ಪ್ರಾರಂಭದಲ್ಲೇ ತಪಾಸಣೆ ಮೂಲಕ ಕಾಯಿಲೆಗಳನ್ನು ಪತ್ತೆ ಹಚ್ಚಿ ತಾಲ್ಲೂಕು ಹಂತದಲ್ಲಿ ಚಿಕಿತ್ಸೆ ಪಡೆಯಲು ತದನಂತರ ಜಿಲ್ಲಾ ಹಂತಕ್ಕೆ ಹೋಗಿ ಚಿಕಿತ್ಸೆ ಪಡೆಯಲು, ಹೀಗೆ ಬೇಕಾದಲ್ಲಿ ವೈದ್ಯರ ಶಿಫಾರಸ್ಸು ಪತ್ರದೊಂದಿಗೆ ಶಸ್ತ್ರ ಚಿಕಿತ್ಸೆ ಮಾಡಿಸಿಕೊಳ್ಳಲು ಈ ಕಾರ್ಯಕ್ರಮ ಸಹಕಾರಿಯಾಗಿದೆ.

5) ಹಲವೆಡೆ ವೈದ್ಯರು ಮುಂಜಾಗ್ರತೆ ವಹಿಸಲು ಸೂಕ್ತ ಸಲಹೆಗಳನ್ನು ನೀಡಿರುವುದರಿಂದಾಗಿ ಶಿಕ್ಷಕರು, ಪೋಷಕರು ಮತ್ತು ಮಕ್ಕಳಲ್ಲಿ ಅರಿವು ಉಂಟು ಮಾಡುವಲ್ಲಿ ಈ ಕಾರ್ಯಕ್ರಮ ಸಹಕಾರಿಯಾಗಿದೆ.
6) ಸರ್ಕಾರದ ಯೋಜನೆಗಳಾದ ಮಾತ್ರೆಗಳ ಸರಬರಾಜು ಹಾಗು ಲಸಿಕೆ ನೀಡುವಿಕೆ ಇಂದಾಗಿ ಸಾಕಷ್ಟು ಅನಕ್ಷರಸ್ಥ ಮತ್ತು ಬಡ ಪೋಷಕರಿಗೆ ಸಮಸ್ಯೆ ಬಗೆಹರಿಸಿದಂತಾಗಿದೆ ಹಾಗು ನಮ್ಮ ಶಾಲೆಗೆ ಬರುವ ಮಕ್ಕಳ ಆರೋಗ್ಯದತ್ತ ಗಮನ ಹರಿಸುವಲ್ಲಿ, ದೈಹಿಕ ಮತ್ತು ಮಾನಸಿಕ ಬೆಳವಣಿಗೆಗೆ ಸಹಕಾರಿಯಾಗಿದೆ.
7) ಆರೋಗ್ಯ ತಪಾಸಣೆಯಿಂದಾಗಿ ಮಕ್ಕಳ ಮೇಲೆ ಉಂಟಾದ ಪರಿಣಾಮಗಳು ಮನಮುಟ್ಟುವಂತಿವೆ, ಇವು ಚೇತರಿಸಿಕೊಳ್ಳುವಲ್ಲಿ ಸಹಕಾರಿಯಾಗಿವೆ, ಇವುಗಳ ಕೆಲವು ಉದಾಹರಣೆಗಳು ಹೀಗಿವೆ
   I. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಜಯಶ್ರೀ ವೃತ್ತ ಭದ್ರಾವತಿ ತಾಲ್ಲೂಕಿನ ರಕ್ಷಿತ್ ಎಂಬ ಹುಡುಗನಿಗೆ ಸುವರ್ಣ ಆರೋಗ್ಯ ಚೈತನ್ಯದಡಿ ತಪಾಸಣೆ ಮಾಡಿದಾಗ ಹೃದಯ ತೊಂದರೆಯಿಂದ ಬಳಲುತ್ತಿರುವ ಸಮಸ್ಯೆ ಪತ್ತೆ ಹಚ್ಚಿ ತಾಲ್ಲೂಕು ಆಸ್ಪತ್ರೆಗೆ,ನಂತರ ಜಿಲ್ಲಾ ಆಸ್ಪತ್ರೆಯಲ್ಲಿ ಪರೀಕ್ಷಿಸಿ, ಈಗ ಈತನು ಬೆಂಗಳೂರಿನ ಜಯದೇವ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಲು ಸಹಕಾರಿಯಾಯಿತು.
   II. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಅಲಗೇರಿಮಂಡಿ ಹೊಸನಗರ ತಾಲ್ಲೂಕಿನ ಏಳನೇ ತರಗತಿಯ ರಾಜೇಶ್ವರಿಗೆ ಕೆಂಪು ರಕ್ತ ಕಣಗಳ ಕೊರತೆ ಇರುವುದು ಕಂಡು ಬಂದಿದ್ದು ಈಗ ಔಷಧಿ ನೀಡಿದ ನಂತರ ಕಲಿಕೆಯಲ್ಲಿ ತೊಡಗಿಸಿಕೊಳ್ಳಲು ಅನುಕೂಲವಾಗಿದೆ.

III. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಬೊಮ್ಮನ ಕಟ್ಟೆ ಭದ್ರಾವತಿ ತಾಲ್ಲೂಕಿನ ಮಗುವಿಗೆ ದೃಷ್ಠಿ ದೋಷ ಗುರುತಿಸಿ ಶಿವಮೊಗ್ಗ ಶಂಕರ್ ಕಣ್ಣಿನ ಆಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸೆ ನಂತರ ಉತ್ತಮವಾಗಿ ಕಲಿಕೆಯಲ್ಲಿ ತೊಡಗಿಕೊಳ್ಳಲು ಸಹಕಾರಿಯಾಗಿದೆ.

IV. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಕಮ್ಮಚ್ಚಿ ಹೊಸನಗರ ತಾಲ್ಲೂಕಿನ ಭಾಗ್ಯಲಕ್ಷ್ಮಿ ಎಂಬ ಮಗು ಬಹುವಿಕಲತೆಯನ್ನು ಹೊಂದಿದ್ದು ತಪಾಸಣೆಯ ನಂತರ, ವೈದ್ಯರಿಂದ ನೀಡಿದ ಚಿಕಿತ್ಸೆ ಮತ್ತು ವ್ಯಾಯಾಮದಿಂದಾಗಿ ಈಗ ಈಕೆ ಒಂದೊಂದು ಅಕ್ಷರ ಉಚ್ಚರಿಸಲು ಯತ್ನಿಸುತ್ತಿದ್ದಾಳೆ, ಅಲ್ಲದೆ ಇತರೆ ಮಕ್ಕಳೊಡನೆ ಸಂತೋಷದಿಂದ ಬೆರೆಯುತಿದ್ದಾಳೆ.

V. ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ ತೊಗರ್ಸಿ ಶಿಕಾರಿಪುರ ತಾಲ್ಲೂಕಿನ ಎರಡನೇ ತರಗತಿಯ ವಿದ್ಯಾರ್ಥಿನಿಯಾದ ಶ್ರುತಿ. ಪಿ ಗೆ ಶ್ರವಣ ದೋಷವಿದ್ದು ಆರೋಗ್ಯ ತಪಾಸಣೆಯ ಶಿಫಾರಸ್ಸಿನ ಮೇರೆಗೆ ಶ್ರವಣ ಧ್ವನಿ ಉಪಕರಣ ನೀಡಿರುವುದ ರಿಂದ, ಈಗ ಈಕೆಯು ಶಬ್ದಗಳನ್ನು, ಪದಗಳನ್ನು ಆಲಿಸಿ ಪ್ರತಿಕ್ರಿಯಿಸಲು ಯತ್ನಿಸುತಿದ್ದಾಳೆ.

8) ಆರೋಗ್ಯ ತಪಾಸಣೆಯಿಂದಾಗಿ ಮುಖ್ಯ ಶಿಕ್ಷಕರು, ಸಹ ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಪೋಷಕರಲ್ಲಿ ಸ್ವಚ್ಛತೆ ಕಾಪಾಡಿದರೆ ಆರೋಗ್ಯ ಕಾಪಾಡುವ ಹಾಗೆ ಎಂಬುದು ತಿಳಿದಿದೆ (ಆರೋಗ್ಯವೇ ಭಾಗ್ಯ ). ಹಾಗಾಗಿ ಪೊಷಕರು ತಮ್ಮ ಮಕ್ಕಳನ್ನು ಪ್ರತಿದಿನ ಸ್ನಾನ ಮಾಡಿಸಿ, ತಲೆಬಾಚಿ , ಕಳುಹಿಸುತಿದ್ದಾರೆ, ಅಲ್ಲದೆ ವಿದ್ಯಾರ್ಥಿಗಳು ದಿನಕ್ಕೆರಡು ಬಾರಿ ಹಲ್ಲುಜ್ಜುತಿದ್ದಾರೆ, ಊಟಕ್ಕಿಂತ ಮುನ್ನ ಸೋಪಿನಿಂದ ಕೈ ತೊಳೆಯುತ್ತಿದ್ದಾರೆ, ಹಾಗೂ ಮಕ್ಕಳು ಮೂತ್ರ ವಿಸರ್ಜನೆಗೆ ಶೌಚಾಲಯಗಳನ್ನು ಬಳಸುತ್ತಿದ್ದಾರೆ ಮತ್ತು ಶೌಚಾಲಯಗಳನ್ನು ಬಳಸುವ ಮುನ್ನ ಮತ್ತು ನಂತರ ನೀರನ್ನು ಹಾಕುತ್ತಿದ್ದಾರೆ ಎಂಬ ಅಂಶಗಳು ಕಂಡು ಬಂದಿದೆ.

9) ಶಾಲೆಗಳಲ್ಲಿ ಮುಖ್ಯ ಶಿಕ್ಷಕರು ಮತ್ತು ಸಹ ಶಿಕ್ಷಕರು ಕುಡಿಯುವ ನೀರಿನ ಶುದ್ದತೆಗಾಗಿ ಮತ್ತು ಸ್ವಚ್ಛತೆಗಾಗಿ ಅಧ್ಯಯನಕ್ಕೆ ಒಳಪಡುವ ಶೇಕಡ 90% ರಷ್ಟು ಶಾಲೆಗಳಲ್ಲಿ ಅಕ್ವಾಗಾರ್ಡ್ ಬಳಸುತ್ತಿದ್ದಾರೆ, ಮತ್ತು ಇನ್ನುಳಿದ 10% ಶಾಲೆಗಳಲ್ಲಿ ನೀರಿನ ಪಿಲ್ಟರ್ ಬಳಸುತ್ತಿದ್ದಾರೆ.

10) ಶಾಲೆಗಳಲ್ಲಿ ಮುಖ್ಯ ಶಿಕ್ಷಕರು, ಸಹ ಶಿಕ್ಷಕರೊಡನೆ ಆರೋಗ್ಯಕರ ಪರಿಸರವಿರುವಲ್ಲಿ ಮುಂಜಾಗ್ರತೆ ಕ್ರಮವಹಿಸುತ್ತಿದ್ದಾರೆ **ಉದಾಹರಣೆಗೆ** ಕಲ್ಯಾಣ ಹಿರಿಯ ಪ್ರಾಥಮಿಕ ಶಾಲೆ ವಿದ್ಯಾಮಂದಿರ ಬೊಮ್ಮನಕಟ್ಟೆಯಲ್ಲಿ ಪರಿಸರ ಸಂರಕ್ಷಣೆ ಹಾಗು ಆಮ್ಲಜನಕ ಸಹಿತ ಗಾಳಿ ದೊರಕಲು ಗಿಡಗಳನ್ನು ನೆಡಲಾಗಿದೆ.ಕೆಲವು ಶಾಲೆಗಳಲ್ಲಿ ಬೆಳೆದ ಪಾರ್ಥೇನಿಯಮ್ ಸಸಿಗಳನ್ನು ಕಿತ್ತು ಎಸೆಯುತ್ತಿದ್ದಾರೆ, ಶಾಲಾ ಮೈದಾನದ ಸ್ವಚ್ಛತೆಯತ್ತ ಗಮನ ಹರಿಸುತ್ತಿದ್ದಾರೆ.

11) ಈ ಕಾರ್ಯಕ್ರಮದಿಂದ ಶಿಕ್ಷಕರಿಗೆ ಹೊಸ ಖಾಯಿಲೆಗಳನ್ನು. ಪತ್ತೆ ಹಚ್ಚುವಲ್ಲಿ ಸಹಕಾರಿಯಾಗಿದೆ ಮತ್ತು ಮುಂಜಾಗ್ರತಾ ಕ್ರಮವಹಿಸಲು ಅನುವು ಮಾಡಿಕೊಟ್ಟಿದೆ.

12) ಹಿರಿಯ ಪ್ರಾಥಮಿಕ ತರಗತಿಗಳಿಗೆ ಕಾಲಿಡುವ ಹದಿಹರೆಯ (ಅಪ್ರಾಪ್ತ) ವಯಸ್ಸಿಗೆ ಬಂದ ಮಕ್ಕಳಿಗೆ ಆಂತರಿಕ ಶುಚಿತ್ವವನ್ನು ಕಾಪಾಡಿಕೊಳ್ಳುವಲ್ಲಿ, ಅರಿವು ಮೂಡಿಸುವಲ್ಲಿ ಈ ಕಾರ್ಯಕ್ರಮ ಸಹಕಾರಿಯಾಗಿದೆ

# ಅಧ್ಯಾಯ -8

## 8.1- ಸಲಹೆಗಳು (ಪರಿಹಾರಗಳು);

70 ಶಾಲೆಗಳ ದತ್ತಾಂಶ ಸಂಗ್ರಹಿಸಿ ಅವಲೋಕಿಸಿದಾಗ ಕೆಲವು ಸಲಹೆಗಳು ನೀಡುವುದು ಅತಿ ಅವಶ್ಯಕವೆನಿಸಿತು. ಅಲ್ಲದೆ ಕೆಲವು ಮುಖ್ಯ ಶಿಕ್ಷಕರು ಸಹ ಮುಕ್ತವಾಗಿ ತಮ್ಮ ಅಭಿಪ್ರಾಯಗಳನ್ನು ಸಲಹಾರೂಪದಲ್ಲಿ ನೀಡಿರುತ್ತಾರೆ. ಸಲಹೆಗಳು ಈ ಕೆಳಕಂಡಂತಿವೆ;

- ❖ ಈ ಕಾರ್ಯಕ್ರಮವು ಎಲ್ಲಾ ಶಾಲೆಗಳಲ್ಲಿ ಪ್ರತಿ ವರ್ಷ 3-4 ಬಾರಿಯಾಗಬೇಕು, ಅಲ್ಲದೆ ವೈದ್ಯರು ಬರುವ ಮುನ್ನಬರುವ ದಿನಾಂಕವನ್ನು ತಿಳಿಸಿದರೆ ಮಕ್ಕಳ ಗೈರು ಹಾಜರಾತಿಯನ್ನು ತಡೆಗಟ್ಟಬಹುದು. ಇದರಿಂದ ಶಾಲೆಗೆ ದಾಖಲಾದ ಎಲ್ಲಾ ಮಕ್ಕಳು ತಪಾಸಣೆಗೆ ಒಳಪಡುತ್ತಾರೆ. ಪ್ರಸ್ತುತ ಸನ್ನಿವೇಶದಲ್ಲಿ ಕೆಲವು ಮಕ್ಕಳು ತಪಾಸಣೆಯ ದಿನ ಗೈರು ಹಾಜರಿರುವುದರಿಂದ ತಪಾಸಣೆಯಿಂದ ವಂಚಿತರಾಗಿದ್ದಾರೆ.
- ❖ ಮಾತ್ರೆಗಳು ಮತ್ತು ಲಸಿಕೆಗಳು ತಪಾಸಣಾ ಸಂದರ್ಭದಲ್ಲಿ ನೀಡಿದರೆ ಇನ್ನೂ ಉತ್ತಮ.
- ❖ ಕೆಲವೆಡೆ ವೈದ್ಯರು ಸಂಪೂರ್ಣ ತಪಾಸಣೆ ಮಾಡದೇ ಸರಾಸರಿಯಾಗಿ ನೋಡುತ್ತಿದ್ದಾರೆ, ಇದನ್ನು ತಡೆಗಟ್ಟಬೇಕು ಮತ್ತು ಸಂಪೂರ್ಣ ತಪಾಸಣೆ ಮಾಡಬೇಕು.
- ❖ ಶಾಲೆಗಳಿಗೆ ದಾದಿಯರ ಭೇಟಿ ಅತೀ ಕಡಿಮೆಯಾಗಿದೆ, ಹೆಚ್ಚಿಸಬೇಕು.
- ❖ ಅಪ್ರಾಪ್ತ ವಯಸ್ಸಿಗೆ ಬಂದ ಹೆಣ್ಣು ಮಕ್ಕಳಿಗೆ ಶುಚಿತ್ವ ಕಾಪಾಡುವುದು ಹೇಗೆ ಎಂಬುದನ್ನು ತಿಳಿಸಬೇಕು ಮತ್ತು ಈಗಾಗಲೇ ಶಾಲೆಗಳಿಗೆ ಪ್ಯಾಡ್ ಗಳ ಸರಬರಾಜು ಶುಚಿ ಎಂಬ ಹೆಸರಿನಲ್ಲಾಗಿದೆ, ಇವುಗಳ ಉದ್ದೇಶ ಮತ್ತು ಬಳಕೆಯ ಬಗ್ಗೆ ಮಹಿಳಾ ಶಿಕ್ಷಕಿಯರಿಂದ ತಿಳಿವಳಿಕೆಯನ್ನು ಶಾಲೆಯಲ್ಲಿ ಓದುತ್ತಿರುವ ಹೆಣ್ಣು ಮಕ್ಕಳಿಗೆ ನೀಡಬೇಕು ಮತ್ತು ಬಳಸಬೇಕು.

## 8.2-ಅಧ್ಯಯನಕಾರರಿಗೆ ಅಧ್ಯಯನ ಮುಂದುವರೆಸಲು ಮುಂದಿನ ಕ್ಷೇತ್ರಗಳು;

- ➢ ಶಾಲೆಗಳಲ್ಲಿ ಆರೋಗ್ಯ ತಪಾಸಣೆಯ ಪ್ರಭಾವದಿಂದಾಗಿ ಬುದ್ಧಿಮಾಂದ್ಯ ಮಕ್ಕಳಲ್ಲಿ ಆಗಿರುವ ಪರಿವರ್ತನೆ ಮತ್ತು ಕಲಿಕೆ ತಿಳಿದು ಕೊಳ್ಳುವುದು.
- ➢ ವಿಷೇಶ ಖಾಯಿಲೆಯುಳ್ಳ ಮಕ್ಕಳ ಖಾಯಿಲೆಗಳ ನಿವಾರಣೆಯಲ್ಲಿ ಈ ಕಾರ್ಯಕ್ರಮದ ಪರಿಣಾಮ ಅರಿತುಕೊಳ್ಳುವುದು.
- ➢ ವೈದ್ಯರ ಅಲಕ್ಷ್ಯದ ಕಾರಣಗಳನ್ನು ಅರಿತುಕೊಳ್ಳುವುದು.

## ಉಪಸಂಹಾರ :

ಈ ಅಧ್ಯಯನದಿಂದ ನನಗಾದ ಕಲಿಕೆ ಏನೆಂದರೆ, ಸುವರ್ಣ ಆರೋಗ್ಯ ಚೈತನ್ಯ ಕಾರ್ಯಕ್ರಮದಡಿಯಲ್ಲಿ ಎಲ್ಲಾ ಸರ್ಕಾರಿ ಮತ್ತು ಖಾಸಗೀ ಶಾಲೆಗಳಿಗೆ ಸರ್ವ ಶಿಕ್ಷಣ ಅಭೀಯಾನದ ವತಿಯಿಂದ ಒಂದು ಉತ್ತಮ ಕೊಡುಗೆ, ಇದರಿಂದಾಗಿ ಎಷ್ಟೋ ಬಡ ಮಕ್ಕಳ ಆರೋಗ್ಯ ತಪಾಸಣೆಯಾಗುತ್ತಿದೆ.

ಮಕ್ಕಳ ಆರೋಗ್ಯ ಕಾಪಾಡುವಲ್ಲಿ ಶಾಲೆಯ ಪಾತ್ರ ಬಹಳ ಮುಖ್ಯ ಆಸಕ್ತಿ ಹಾಗೂ ಶ್ರದ್ಧೆ ತೋರಿ ಮಕ್ಕಳಿಗೆ ಆರೋಗ್ಯ ಹಾಗೂ ಸ್ವಯಂ ನೈರ್ಮಲ್ಯದ ಕಲ್ಪನೆಯನ್ನು ಪ್ರಾಥಮಿಕ ಹಂತದಲ್ಲಿ ಮೂಡಿಸಿದರೆ ಮಕ್ಕಳನ್ನು ಆರೋಗ್ಯವಂತ ಪ್ರಜೆಗಳಾಗಿ ರೂಪಿಸಬಹುದು. ರೋಗ ರುಜಿನವಿಲ್ಲದೆ ಆರೋಗ್ಯವಾಗಿರುವ ಮಗುವಿನ ವೈಯಕ್ತಿಕ ಸುಚಿತ್ವವು ಆ ಮಗುವಿನ ವ್ಯಕ್ತಿತ್ವ ವಿಕಾಸದ ಸರಿದಾರಿಯಲ್ಲಿ ಸಾಗಿಸುತ್ತದೆ. ರೋಗದಿಂದ ಶಾರೀರಿಕ, ಮಾನಸಿಕ ನ್ಯೂನತೆಗೆ ತುತ್ತಾಗುವ ಮಕ್ಕಳು ಎ ಎಲ್ಲರಂತೆ ದೈನಂದಿನ ಚಟುವಟಿಕೆಗಳಲ್ಲಿ ತೊಡಗಲಾರದೆ ಬೆಳವಣಿಗೆಯಲ್ಲಿ, ಕಲಿಕೆಯಲ್ಲಿ ಹಿಂದುಳಿಯುತ್ತಾರೆ. ಶಾಲೆಯಲ್ಲಿ ನೀಡುವ ವಿವಿಧ ಮಾತ್ರೆಗಳಾದ ವಿಟಮಿನ್ ಎ, ಆಲ್ಬೆಂಡೈಜಾಲ್, (ಜಂತು ಹುಳ ನಿವಾರಕ) ಕಬ್ಬಿಣಾಂಶದ ಮಾತ್ರೆಗಳ ಸೇವನೆಯಿಂದ ಮಕ್ಕಳ ಮಾನಸಿಕ ದೈಹಿಕ ಬೆಳವಣಿಗೆಯಲ್ಲಿ ಸಹಕಾರಿಯಾಗಿದೆ. ನೀಡುತ್ತಿರುವ ಲಸಿಕೆ ಗಳಿಂದಾಗಿ ಮುನ್ನೆಚ್ಚರಿಕೆ ವಹಿಸಲು ಸಹಕಾರಿಯಾಗಿದೆ.ಏಕೆಂದರೆ ನಮ್ಮ ಶಾಲೆಗಳಿಗೆ ಬರುವ ಮಕ್ಕಳು ಶೆ 80% ಕ್ಕಿಂತ ಹೆಚ್ಚು ಬಡ ಕುಟುಂಬದವರಾಗಿರುವುದರಿಂದ ( ಕೂಲಿಕಾರ್ಮಿಕ, ಅನಕ್ಷರಸ್ಥ, ಮೊದಲ ತಲೆಮಾರಿನವರು) ಪೋಷಕರು ಮಕ್ಕಳ ಉತ್ತಮ ದೈಹಿಕ ಮತ್ತು ಮಾನಸಿಕ ಬೆಳವಣಿಗೆಗೆ ಮಾತ್ರೆಗಳ ಸೂಕ್ತತೆ, ಲಸಿಕೆಗಳ ಅವಶ್ಯಕತೆ ತಿಳಿಯುವಲ್ಲಿ ಅಸಮರ್ಥರಿದ್ದಾರೆ ಹಾಗು ಇದರ ಖರ್ಚು ವೆಚ್ಚ ಭರಿಸಲು ಕಷ್ಟಸಾಧ್ಯವಾಗಿದೆ. ಆದಕಾರಣ ಸರ್ವ ಶಿಕ್ಷಣ ಅಭಿಯಾನದ ಈ ಕಾರ್ಯಕ್ರಮ ಒಂದು ಅತ್ಯುತ್ತಮವಾದ ಕೊಡುಗೆ ಎನ್ನುವಲ್ಲಿ ತಪ್ಪೇನಿಲ್ಲ. ಅಲ್ಲದೇ ಜನನವಾಗಿರುವ ಎಲ್ಲಾ ಮಕ್ಕಳಿಗೂ ಈ ಕಾರ್ಯಕ್ರಮವು ಸಹಕಾರಿಯಾಗಿರುವುದು ಕಂಡುಬರುತ್ತದೆ. ಕೆಲವೆಡೆ ಶಿಕ್ಷಕರಿಗೂ ಸಹ ಲಸಿಕೆ ನೀಡಿರುವುದು ಕಂಡುಬಂದಿದೆ ಮತ್ತು ಕೆಲವೆಡೆ ದಾದಿಯರು ಕೂಡ ಈ ಕಾರ್ಯಕ್ರಮದಲ್ಲಿ ತುಂಬಾ ವ್ಯವಸ್ಥಿತವಾಗಿ ಭಾಗವಹಿಸಿರುವುದು ಮೇಲ್ನೋಟಕ್ಕೆ ಗೋಚರವಾಗುತ್ತದೆ. ಮಕ್ಕಳ ಆರೋಗ್ಯ ಉತ್ತಮಗೊಳಿಸುವಲ್ಲಿ ನಾವು ಕೈಗೊಳ್ಳಬೇಕಾದ ಕ್ರಮಗಳು ಹಾಗೂ ದೈನಂದಿನ ಚಟುವಟಿಕೆಗಳ ಬಗ್ಗೆ ಮಕ್ಕಳಿಂದ ದಿನಚರಿಯನ್ನು ಪಾಲಿಸವುದೂ ಕೂಡ ಉತ್ತಮ ಕಾರ್ಯವೆನಿಸುತ್ತದೆ. ಇದರಿಂದ ಮಕ್ಕಳ ಮಾನಸಿಕ ದೈಹಿಕ ಆರೋಗ್ಯ ವೃದ್ಧಿಸುತ್ತದೆ ಜೊತೆಗೆ ಮಕ್ಕಳ ಆರೋಗ್ಯ ತಪಾಸಣೆಯು ಇಲಾಖೆಯ ಬಹು ಆಶಾದಾಯಕವಾದ ಕಾರ್ಯಕ್ರಮವಾಗಿದ್ದು ಇದನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡುವ ಜವಾಬ್ದಾರಿ ಇಲಾಖೆಯ ಎಲ್ಲಾ ಸ್ನೇಹಿತರ ಮೇಲಿದೆ. ಇಂತಹ ಒಂದು ಚಿಕ್ಕ ಪ್ರಯತ್ನ ನನ್ನ ಅಧ್ಯಾಯನದಿಂದ ಆಗಿದೆ ಎಂಬ ಆಶೆಯದೊಂದಿಗೆ ವರದಿಗೆ ಪೂರ್ಣವಿರಾಮ ನೀಡುತ್ತಿದ್ದೇನೆ.

----------------88888---------------

# ಅನುಬಂಧ -2

ತಾಲ್ಲೂಕುವಾರು ಆಯ್ದ, ವ್ಯಾಪ್ತಿಗೆ ಬರುವ ಶಾಲೆಗಳು ಕ್ಲಸ್ಟರ್ ಪಟ್ಟಿ

| ಕ್ರಮ ಸಂಖ್ಯೆ | ತಾಲ್ಲೂಕು | ಕ್ಲಸ್ಟರ್ ಗಳು |
|---|---|---|
| 1 | ಶಿವಮೊಗ್ಗ | 1) ಗಾಡಿಕೊಪ್ಪ<br>2) ನಿಧಿಗೆ<br>3) ಮಂಡಘಟ್ಟ |
| 2 | ಭದ್ರಾವತಿ | 1) ಬಿ,ಆರ್ ಪಿ<br>2) ನಗರ-1<br>3) ಆಗರದಹಳ್ಳಿ<br>4) ಬೊಮ್ಮನಕಟ್ಟೆ<br>5) ಜಯಶ್ರೀ ವೃತ್ತ |
| 3 | ತೀರ್ಥಹಳ್ಳಿ | 1) ಮಂಡಗದ್ದೆ<br>2) ಹಿರೇಗದ್ದೆ<br>3) ಗುಡ್ಡೇಕೊಪ್ಪ<br>4) ಕೋಣಂದೂರು<br>5) ಕುಡುಮಲ್ಲಿಗೆ |
| 4 | ಹೊಸನಗರ | 1) ನಿಟ್ಟೂರು<br>2) ನಗರ<br>3) ಅಲಗೇರಿಮಂಡ್ರಿ<br>4) ಮಾರುತೀಪುರ<br>5) ಹೊಸನಗರ<br>6) ಕೋಡೂರು<br>7) ಮೂಗುಡ್ತಿ<br>8) ಕಮ್ಮಚ್ಚಿ |
| 5 | ಸಾಗರ | 1) ತಾಳಗುಪ್ಪ<br>2) ಬೆಳಲಮಕ್ಕಿ<br>3) ಸೈದೂರು<br>4) ನಗರ ಪ್ರದೇಶ |
| 6 | ಶಿಕಾರಿಪುರ | 1) ಬೇಗೂರು<br>2) ಅಂಬಾರಗೊಪ್ಪ<br>3) ಕಪ್ಪನಹಳ್ಳಿ<br>4) ತೊಗರ್ಸಿ<br>5) ಬಿಳಿಕಿ<br>6) ನೆಲವಾಗಿಲು |
| 7 | ಸೊರಬ | 1) ಹೊಸಬಾಳೆ<br>2) ಬೆನ್ನೂರು<br>3) ಸೊರಬ<br>4) ಪಿ,ಡಬ್ಲ್ಯೂ,ಡಿ,ಕಾಲೊನಿ |
| ಒಟ್ಟು = 70 ಶಾಲೆಗಳು | | |



ಕುಮಾರಿ ಗುಪ್ತ 5ನೇ ತರಗತಿ ಸ,ಕಿ,ಪ್ರಾ,ಶಾ ಗುತ್ಯಪ್ಪ ಕಾಲೊನಿ ಶಾಲೆ ಶಿವಮೊಗ್ಗ ಇಲ್ಲಿ ವೈದ್ಯಕಿಯ ತಪಾಸಣೆಯ ಸಂದರ್ಭದಲ್ಲಿ ಹೃದಯ ಖಾಯಿಲೆ ಗುರುತಿಸಲಾಯಿತು ಮತ್ತು ಶಸ್ತ್ರಚಿಕಿತ್ಸೆಗೆ ಶಿಫಾರಸ್ಸು ಮಾಡಲಾಗಿದ್ದು ಈಗ ಈಕೆಯ ಹೃದಯದ ತೂತದ ಪ್ರಮಾಣ ಕಡಿಮೆಯಾಗುತ್ತಿರುವುದು ಕಂಡುಬಂದಿದೆ.



ಕುಮಾರಿ ನಿಕಿತ ಆರನೇ ತರಗತಿ ಸ,ಹಿ,ಪ್ರಾ ಶಾ ಗಾಡಿಕೊಪ್ಪ ಶಿವಮೊಗ್ಗ . ಈಕೆಗೆ ದೃಷ್ಟಿದೊಷ ವಿದ್ದು ಶಾಲೆಯಲ್ಲಿ ನಡೆದ ವೈದ್ಯಕೀಯ ತಪಾಸಣೆಯಿಂದಾಗಿ ವೈದ್ಯರ ಸಲಹೆ ಮೇರೆಗೆ ಕನ್ನಡಕ ಕಡ್ಡಾಯವಾಗಿ ನಿರಂತರ ಧರಿಸಲು ಸೂಚಿಸಿರುತ್ತಾರೆ ಮತ್ತು ಈಕೆಗೆ ಈಗ ಕನ್ನಡಕ ಕಲಿಕೆಗೆ ಸಹಕಾರಿಯಾಗಿದೆ, ಹಾಗು ದೊಷ ನಿವಾರಣೆಯಾಗಿದೆ.



ಕುಮಾರಿ ವಂದನ ಸ,ಕಿ,ಪ್ರಾ,ಶಾ ಗಾಡಿಕೊಪ್ಪ ತಾಂಡ ಶಿವಮೊಗ್ಗ ಇಲ್ಲಿ ಐದನೇ ತರಗತಿಯಲ್ಲಿ ಓದುತ್ತಿರುವ ಈಕೆಗೆ ವೈದ್ಯಕೀಯ ತಪಾಸಣೆಯ ಸಂದರ್ಭದಲ್ಲಿ ಬಿಳಿರಕ್ತದ ಕಣಗಳ ಪ್ರಮಾಣ ಕಡಿಮೆ ಇರುವುದು ಕಂಡು ಬಂದಿದ್ದು ನಂತರ ಈಗ ಈಕೆಗೆ ಪ್ರತಿ ಮೂರು ತಿಂಗಳಿಗೊಮ್ಮೆ ರಕ್ತ ಶುದ್ದಿಕರಿಸಬೇಕಾಗಿದೆ.ಈಗ ಇಕೆಯ ಆರೋಗ್ಯ ಸುಧಾರಿಸಿದೆ.

# ಆಕರ ಗ್ರಂಥಗಳು


| ಕ್ರಮ ಸಂಖ್ಯೆ | ಪುಸ್ತಕದ ಹೆಸರು | ಲೇಖಕರು |
|---|---|---|
| 1 | ಆರೋಗ್ಯ ಶಿಕ್ಷಣ | ಮೊಹನ್ ಪಾಳೇಗಾರ್ ಮತ್ತು ಕೆ , ಭೈರಪ್ಪ |
| 2 | ನಮ್ಮ ಆರೋಗ್ಯ | ಮೊಹನ್ ಪಾಳೇಗಾರ್ |
| 3 | ಸ್ವಯಮೇವ ಸುರಭಿ;ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಸಂಪನ್ಮೂಲ ಸಾಮಗ್ರಿ | ಡಿ,ಇ,ಪಿ.ಎಸ್.ಎಸ್.ಎ.ಕರ್ನಾಟಕ |
| 4 | ಪ್ರಾಥಮಿಕ ಶಾಲಾ ಶೈಕ್ಷಣಿಕ ಮಾರ್ಗದರ್ಶಿ 2014-15 | ಆಯುಕ್ತರ ಕಛೇರಿ ಸಾ,ಶಿ,ಇ,ಬೆಂಗಳೂರು |
| 5 | ಕರ್ನಾಟಕ ಎಡುಕೇಶನ್ | ಕಾರ್.ನಿಕ್.ಇನ್.ಸುವರ್ಣ ಚೈತನ್ಯ ಕಾರ್ಯಕ್ರಮ. |